ಎಪ್ರಿಲ್ 2019
ಸಂಪುಟ 15
ಸಂಚಿಕೆ 04

www.buntsanghablr.com

# ಬಂಟರ ಸಂಘ ಬೆಂಗಳೂರು
# BUNTS' SANGHA BANGALORE
(A Charitable Institution)

ಮಾಸ ಪತ್ರಿಕೆ





ಸೇವಾ ಚೇತನ




ಯಕ್ಷ ತೋರಣ



ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ-ಧಾತ್ರಿ

ಸಂಚಿಕೆ ಬೆಲೆ
ರೂ 1/-

324, Chord Road, Vijayanagara, Bengaluru - 560 040.
Ph: 080 2339 9323, 2339 9635, E: info@buntsanghablr.com


SEASONS GREETINGS
from
25 YEARS
Swathi
GROUP
Your Happiness is our Priority
We ensure to meet the needs of our guests by providing excellent facilities. Being the best business hotel in Bengaluru, Attide hotels blends comfort and luxury to give an unparalleled experience which makes our guests visit us again in there next trip.
Attide Boutique Hotel
Swathi Group of Restaurants
Swathi Caterers
#5, West of Chord Road, Rajaji Nagar, Bengaluru - 560086
9900013400 / 8023595555
sr24@swathigroup.co.in | catering@swathigroup.co.in | info24@swathigroup.co.in
swathigroup.co.in
ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 15** **APRIL 2019** **ISSUE 04**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ :
**ಶ್ರೀ ಮುರಲೀಧರ ಹೆಗ್ಡೆ**

ಗೌ॥ ಸಂಪಾದಕರು :
**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀ ಸುಧಾಕರ ಶೆಟ್ಟಿ, ಅಚ್ಲಾಡಿ**
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಶ್ರೀ ಸತೀಶ್ ಶೆಟ್ಟಿ, ವಕ್ವಾಡಿ**
**ಕುಮಾರಿ ಶಾಲ್ಮಲೀ ಸುರೇಶ್**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕಿ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 & 5 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ – "ಧಾತ್ರಿ" – ಕ್ಷಃ ಕಿರಣ | 6 |
| 5. | ಸಮಾಜದಲ್ಲಿ ಸೇತುವೆಯಾಗಿ ಕೆಲಸ ಮಾಡಿ ಗೋಡೆಯಾಗಬೇಡಿ | 9 |
| 6. | ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ – ಯಕ್ಷತೋರಣ | 12 |
| 7. | ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು | 14 |
| 8. | ಮಹಾಜ್ಞಾನ, ಮಹಾಕರುಣ | 16 |
| 9. | Your Vote Counts | 21 |
| 10. | ಸೆಲ್ಫಿ ಕಾಲದ ಸ್ವಂತಿಕೆ | 23 |
| 11. | ಅದ್ವೈತ ಸನ್ಯಾಸಿ ಧರೆಗಿಳಿದ ದಿವ್ಯತೇಜ – ಶ್ರೀ ಆದಿ ಶಂಕರರು (788–820) | 25 |
| 12. | ವಿಶ್ವ ವಿಜ್ಞಾನಕ್ಕೆ ಭಾರತದ ಕೊಡುಗೆ | 28 |

**ಮುಖಪುಟ**

**ಸೇವಾ ಚೇತನ**
**ಯಕ್ಷ ತೋರಣ**
**ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ - ಧಾತ್ರಿ**

# ಸಂಪಾದಕೀಯ



ನಮ್ಮ ಯುಗಾದಿ ಸೌರಮಾನ, ಅಂದರೆ ಸೂರ್ಯನ ಗತಿಯ ಆಧಾರದ ಮೇಲೆ ಮಾಡುವ ಕಾಲಗಣನೆಯಲ್ಲಿ ಬರುತ್ತದೆ. 'ಬಿಸು' ಹೊಸ ವರುಷದ ಪ್ರಥಮ ತಿಂಗಳು, 'ಪಗ್ಗು' ತಿಂಗಳು ಬರುವ ಸಂಕ್ರಮಣ. ಸೌರಮಾನ ವರ್ಷಾರಂಭ. ಪಗ್ಗು ತಿಂಗಳಲ್ಲಿ ಮರಗಳಲ್ಲಿ ಹೂ ಹಣ್ಣುಗಳು ತೊನೆದಾಡುತ್ತಿರುತ್ತವೆ. ತರಕಾರಿಗಳು ಯಥೇಚ್ಛವಾಗಿ ಬೆಳೆದಿರುತ್ತವೆ. ಸಮೃದ್ಧಿಯ ಹಬ್ಬ ಬಿಸು ಎಲ್ಲರಿಗೂ ಸಂತೋಷ, ಸಂಭ್ರಮವನ್ನು ತರಲಿ.

ಗತಿಯೇನು ಎನಗೆನುತ ಕೇಳ್ವವರೆ ಎಲ್ಲರುಂ
ಹಿತವೆಂತು ಜಗಕೆಂದು ಕೇಳುವವರಾರು?
ಮತಿಯ ವಿಶ್ವದಿ ಬೆರೆಸಿ ಜೀವಿತವ ವಿಸ್ತರಿಸೆ
ಪಥ ಮುಕ್ತಿಗಾಗಳೇ ಮಂಕುತಿಮ್ಮ

ಸಂಘದಲ್ಲಿ ನಡೆದ 'ಸೇವಾ ಚೇತನ' ಕಾರ್ಯಕ್ರಮದಲ್ಲಿ ಸನ್ಮಾನಿತರಾದವರ ಸಮಾಜ ಸೇವೆಯ ವೈಖರಿಯನ್ನು ಅರಿತಾಗ ಕಗ್ಗದ ಈ ಪದ್ಯ ನೆನಪಿಗೆ ಬಂತು. ತನಗೇನು ನೀಡಿದೆ ಈ ಸಮಾಜ ಎಂದು ಕೇಳುವ ಹಲವರಿರುವ ಈ ಜಗದಲ್ಲಿ "ಹಿತವೆಂತು ಜಗಕೆಂದು ಕೇಳುವ" ಕೆಲವರೂ ಇದ್ದಾರೆ ಎನ್ನುವುದು ಸಮಾಜಕ್ಕೊಂದು ಭರವಸೆ.

ವಿವಿಧ ಅನಾಥಾಶ್ರಮಗಳಿಗೆ ಮಹಾನ್ ಪೋಷಕರಾಗಿರುವ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರು ಕೃಷಿಕರೂ ಆಗಿದ್ದು, ಬೆಂಗಳೂರಿನ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ 30 ಕುಟುಂಬಗಳಿಗೆ ಉಚಿತವಾಗಿ ನಿವೇಶನವನ್ನು ನೀಡಿರುವುದು ಅನನ್ಯ. ತನ್ನ ಉನ್ನತಿಗೆ ತನ್ನ ಸತತ ಪರಿಶ್ರಮವೇ ಕಾರಣ ಎನ್ನುವ ಚಿಂತನೆ ಅಹಂಕಾರವಾದರೆ, ತನ್ನ ಸಾಧನೆ ಹಲವರ ಸಹಕಾರದಿಂದಲೇ ಸಾಧ್ಯವಾಯಿತು ಎನ್ನುವುದು ವಿನಯ. ಸಹಕರಿಸಿದವರನ್ನು ತನ್ನೊಂದಿಗೆ ಪ್ರಗತಿಯತ್ತ ಒಯ್ಯುವುದು ಉದಾತ್ತ ಭಾವ.

ತನ್ನ ಹನ್ನೊಂದನೆಯ ವಯಸ್ಸಿನಲ್ಲಿಯೇ ರಸ್ತೆಯಲ್ಲಿ ಅಪಘಾತಕ್ಕೀಡಾದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸುವ ಮೂಲಕ ಸಮಾಜ ಸೇವೆಗೆ ಚಾಲನೆ ನೀಡಿದ ಅಂಬಲಪಾಡಿಯ ಶ್ರೀ ವಿಶು ಶೆಟ್ಟಿಯವರು, ಕಾಲೇಜು ವಿದ್ಯಾರ್ಥಿಯಾಗಿದ್ದಾಗ 30 ಕ್ಕೂ ಹೆಚ್ಚು ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಿರುವುದು, ಈವರೆಗೆ ಹದಿಮೂರು ಸಾವಿರಕ್ಕೂ ಹೆಚ್ಚು ರೋಗಿಗಳು ಹಾಗೂ ಗಾಯಾಳುಗಳಿಗೆ ಆಸ್ಪತ್ರೆಗೆ ಸೇರಿಸುವ ಮೂಲಕ ಜೀವದಾನ, ಸುಮಾರು 97 ಅನಾಥ ಶವಗಳಿಗೆ ಅಂತ್ಯ ಸಂಸ್ಕಾರ, ಅಮಾಯಕರ ನ್ಯಾಯಕ್ಕಾಗಿ ಸುಮಾರು 400ಕ್ಕೂ ಮಿಕ್ಕ ವ್ಯಾಜ್ಯಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿಯಾಗಿ ಭಾಗವಹಿಸಿರುವುದು, ಸರಕಾರದ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುತ್ತಿರುವುದು, ಕಾರ್ಮಿಕರು, ಮಹಿಳೆಯರು, ಅನಾಥರು, ಮಾನಸಿಕ ಅಸ್ವಸ್ಥರು, ರೋಗ ಪೀಡಿತರು, ಮಕ್ಕಳು, ಗಾಯಗೊಂಡ ಗೋವುಗಳ ರಕ್ಷಣೆಗೆ ಕಟಿಬದ್ಧರಾಗಿರುವುದು ಮುಂತಾದ ಕಾರ್ಯಗಳ ಮೂಲಕ ಸೇವೆಯನ್ನೇ ತನ್ನ ಕರ್ತವ್ಯವಾಗಿಸಿಕೊಂಡಿದ್ದಾರೆ. ಕೋಮು ಸೌಹಾರ್ದ ಹಾಗೂ ಸಮಾಜದ ಶಾಂತಿ ಕಾಪಾಡುವಲ್ಲಿ ಪೋಲಿಸ್ ಇಲಾಖೆಯೊಂದಿಗೆ ಸೇರಿ ಕಾರ್ಯೋನ್ಮುಖರಾಗಿದ್ದಾರೆ.

ಕೌಟುಂಬಿಕ ಸಲಹಾ ಕೇಂದ್ರ, ವನಿತಾ ಸಹಾಯವಾಣಿ, ಮಕ್ಕಳ ಸಹಾಯವಾಣಿ ಮೂಲಕ ನೊಂದ ಮಹಿಳೆಯರ ಮತ್ತು ಮಕ್ಕಳ ಸಂಕಷ್ಟಕ್ಕೆ ಸ್ಪಂದಿಸಿ ನ್ಯಾಯ ಕೊಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವವರು ಶ್ರೀಮತಿ ರಾಣಿ ಶೆಟ್ಟಿಯವರು.

ಪದವಿ, ಅಧಿಕಾರ, ಜನಬಲ, ಧನಬಲ ಇವ್ಯಾವುವೂ ಸೇವೆಗೆ ಅಗತ್ಯವಲ್ಲ. ಬೇಕಿರುವುದು ಒಂದು ಸುಸಂಸ್ಕೃತ, ಸುಂದರ ಮನಸ್ಸು ಅಷ್ಟೇ. ಇಂಥವರ ಸಂತತಿ ಸಾವಿರವಾಗಲಿ, ನಮಗೆಲ್ಲರಿಗೂ ಸ್ಫೂರ್ತಿಯಾಗಲಿ.

**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

# ಅಧ್ಯಕ್ಷರ ಮಾತು



ಆತ್ಮೀಯ ಸದಸ್ಯರೇ,

ತಮಗೆಲ್ಲರಿಗೂ ಹೊಸವರ್ಷ ಸೌರಮಾನ ಯುಗಾದಿ (ಬಿಸು) ಹಬ್ಬದ ಹಾರ್ದಿಕ ಶುಭಾಶಯಗಳು. ನಾವು ಆಚರಿಸುವ ಎಲ್ಲಾ ಹಬ್ಬಗಳು ನಮ್ಮೆಲ್ಲರ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿವೆ. ಬಂಟರು ದೇಶ–ವಿದೇಶದಾದ್ಯಂತ ನೆಲೆಸಿದ್ದರೂ ಕೂಡ ನಮ್ಮ ಆಚರಣೆಗಳನ್ನು ಒಟ್ಟಾಗಿ ತಾವು ನೆಲೆನಿಂತಿರುವ ಸ್ಥಳದಲ್ಲೇ ಆಚರಿಸುತ್ತಿರುವುದು ಸಂತಸದ ವಿಷಯ. ಬೆಂಗಳೂರು ಬಂಟರ ಸಂಘ ತನ್ನ ಅಸ್ತಿತ್ವದ ಆರಂಭಿಕ ದಿನಗಳಿಂದಲೂ ನಮ್ಮ ಸಂಸ್ಕೃತಿ ಹಾಗೂ ಆಚರಣೆಗಳಿಗೆ ಪ್ರಾಮುಖ್ಯತೆ ನೀಡುತ್ತಲೇ ಬಂದಿದೆ. ದಿನಾಂಕ 14.04.2019 ರಂದು ಬೆಳಿಗ್ಗೆಯಿಂದ ರಾತ್ರಿಯವರೆಗೆ ನಮ್ಮ ಸಂಘದ ಆವರಣದಲ್ಲಿ ಸೌರಮಾನ ಯುಗಾದಿ (ಬಿಸು) ಹಬ್ಬವನ್ನು ಬಹಳ ವಿಶೇಷ ಹಾಗೂ ಸಂಭ್ರಮದಿಂದ ಆಚರಿಸಲು ನಾವೆಲ್ಲರೂ ಅಣಿ0ಯಾಗಿದ್ದೇವೆ. ನಮ್ಮ ಎಡೆಬಿಡದ ಕೆಲಸ ಕಾರ್ಯಗಳಿಗೆ ಅಲ್ಪ ವಿರಾಮ ನೀಡಿ ಬಿಸು ಸಡಗರದಲ್ಲಿ ನಮ್ಮ ಸಂಘದ ಸದಸ್ಯರೊಂದಿಗೆ ಇನ್ನಿತರ ಬಂಟರ ಸಂಘಗಳ ಸದಸ್ಯರನ್ನೂ ಪಾಲ್ಗೊಳ್ಳುವಂತೆ ಮಾಡುವ ಉದ್ದೇಶದಿಂದ ಅಂತರ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯನ್ನು ಸಂಘದ ಸಾಂಸ್ಕೃತಿಕ ವಿಭಾಗ ಆಯೋಜಿಸಿದ್ದು, ಕರಾವಳಿ0ು ಸೊಗಡು ನಮ್ಮ ಸಂಕೀರ್ಣದಲ್ಲಿ ಅನಾವರಣಗೊಳ್ಳಲಿದೆ.

ವಿಜಯಾ ಬ್ಯಾಂಕನ್ನು ರಾಷ್ಟ್ರಮಟ್ಟದ ಬ್ಯಾಂಕನ್ನಾಗಿ ಪರಿವರ್ತಿಸಿದ ಹಾಗೂ ಸಾವಿರಾರು ಬಂಟರ ಕುಟುಂಬಗಳಿಗೆ ಆಸರೆಯಾದ ಮಹಾನ್ ವ್ಯಕ್ತಿ ದಿವಂಗತ ಮುಲ್ಕಿ ಸುಂದರ ರಾಮ್ ಶೆಟ್ಟಿಯವರು ಎನ್ನುವುದರಲ್ಲಿ ಎರಡು ಮಾತಿಲ್ಲ. ಇವರು ಸಮುದಾಯಕ್ಕೆ ನೀಡಿದ ಕೊಡುಗೆಯನ್ನು ಚಿರಸ್ಮರಣೀಯವಾಗಿಸುವ ನಿಟ್ಟಿನಲ್ಲಿ ಹಾಗೂ ಅವರ ಸಮಾಜಮುಖಿ ಚಿಂತನೆಗಳು ಇಂದಿನ ಯುವ ಜನಾಂಗಕ್ಕೆ ಪ್ರೇರಣೆಯಾಗಲಿ ಎನ್ನುವ ಆಶಯದಿಂದ 'ದಿವಂಗತ ಮುಲ್ಕಿ ಸುಂದರ ರಾಮ್ ಶೆಟ್ಟಿ' ಪ್ರಶಸ್ತಿಯನ್ನು ಸ್ಥಾಪಿಸಿ ಅದನ್ನು ಬಂಟ ಸಮುದಾ0ುದ ಅರ್ಹ ವ್ಯಕ್ತಿಗೆ ನೀಡುವುದೆಂದು ನಮ್ಮ ಸಮಿತಿಯು ಈಗಾಗಲೇ ತೀರ್ಮಾನಿಸಿದೆ. ಈ ಪ್ರಶಸ್ತಿ0ುನ್ನು ಪ್ರಪ್ರಥಮ ಬಾರಿಗೆ ಬಂಟ ಸಮುದಾಯದ ಹೆಮ್ಮೆಯ ವ್ಯಕ್ತಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ & ಸಿ.ಇ.ಓ. ಶ್ರೀ ರಾಜ್‌ಕಿರಣ್ ರೈ ಜಿ. ಇವರಿಗೆ ಬಿಸು ಸಡಗರ ಸಮಾರಂಭದಂದು ನೀಡಲು ಸಮಿತಿಯು ತೀರ್ಮಾನಿಸಿದೆ. ತಾವೆಲ್ಲರೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬಂಟ ಸಮುದಾಯದ ಈ ಸಡಗರದಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ಬಂಟರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸ್ಥಾಪನೆ.**

ದಿ. ಶ್ರೀ ಎ.ಬಿ. ಶೆಟ್ಟಿಯವರು ಸ್ಥಾಪಿಸಿದ ವಿಜಯಾ ಬ್ಯಾಂಕನ್ನು , ದಿವಂಗತ ಮುಲ್ಕಿ ಸುಂದರ ರಾಮ್ ಶೆಟ್ಟಿಯವರು ರಾಷ್ಟ್ರಮಟ್ಟದ ದರ್ಜೆಗೆ ಕೊಂಡೊಯ್ದಿದ್ದರು. ಆದರೆ ವಿಜಯಾ ಬ್ಯಾಂಕ್ ಇಂದು ಕೇಂದ್ರ ಸರಕಾರದ ಕೆಲವೊಂದು ನಿಯಮಗಳಿಂದಾಗಿ ಇತರ ಬ್ಯಾಂಕ್‌ನೊಂದಿಗೆ ವಿಲೀನಗೊಂಡಿರುವುದು ನಮಗೆಲ್ಲರಿಗೂ ಅತ್ಯಂತ ನೋವನ್ನುಂಟು ಮಾಡಿದೆ. ಆದರೆ, ಪುನಃ ಪುನ: ಅದನ್ನೇ ಯೋಚಿಸುವುದನ್ನು ಬಿಟ್ಟು ಪರ್ಯಾಯವಾಗಿ ನಮ್ಮದೇ ಆದ ಹಣಕಾಸು ಸಂಸ್ಥೆ (ಬಂಟರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯನ್ನು ಹುಟ್ಟು ಹಾಕಿ ಮುಂದಿನ ದಿನಗಳಲ್ಲಿ ಅದನ್ನು ಉನ್ನತ ದರ್ಜೆಗೆ ಏರಿಸುವ ಚಿಂತನೆಯಿದೆ. ದಿನಾಂಕ: 14.04.2019 ರಂದು ನಡೆಯಲಿರುವ ಬಿಸು ಶುಭ ಸಮಾರಂಭದಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿ0ುಾದ ಮ್ಯಾನೇಜಿಂಗ್ ಡೈರೆಕ್ಟರ್ & ಸಿ.ಇ.ಓ. ಶ್ರೀ ಜಿ. ರಾಜ್‌ಕಿರಣ್ ರೈಯವರು 'ಬಂಟರ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ' ಹೆಸರನ್ನು ಅನಾವರಣಗೊಳಿಲಿರುವರು.

**ಬಂಟ್ಸ್ ಹಾಸ್ಟೆಲ್ ಸ್ಥಾಪನೆ :**

ಶಿಕ್ಷಣ, ಉದ್ಯೋಗ ಹಾಗೂ ಉದ್ದಿಮೆಗಾಗಿ ರಾಜ್ಯದ ರಾಜಧಾನಿಗೆ ಆಗಮಿಸುವ ಯುವ ಸಮುದಾಯಕ್ಕೆ ನೆರವಾಗುವ ಉದ್ದೇಶದಿಂದ ಹಾಸ್ಟೆಲ್ ಪ್ರಾರಂಭಿಸುವ ನಿಟ್ಟಿನಲ್ಲಿ ಸೂಕ್ತ ನಿವೇಶನವನ್ನು ಗುರುತಿಸುವಲ್ಲಿ ಸಮಿತಿಯು ಕಾರ್ಯಪ್ರವೃತ್ತವಾಗಿದೆ. ಇದರಿಂದ ಕೇವಲ ವಿದ್ಯಾರ್ಥಿಗಳು ಹಾಗೂ ಉದ್ಯೋಗಸ್ಥರಿಗೆ ಮಾತ್ರವಲ್ಲದೇ ಕೆಲದಿನಗಳ ಮಟ್ಟಿಗೆ ರಾಜಧಾನಿಗೆ ಆಗಮಿಸುವ ಯುವಕರಿಗೆ ಕನಿಷ್ಟ ದರದಲ್ಲಿ ಹಾಸ್ಟೆಲ್ ಮುಖೇನ ತಾತ್ಕಾಲಿಕ ವಸತಿ ಸೌಲಭ್ಯ ನೀಡುವ ಕಾಳಜಿ ನಮ್ಮದು. ಆರ್ಥಿಕವಾಗಿ ಸಬಲರಲ್ಲದ ಬಂಟ ಯುವಕರಿಗೆ ಮಾನಸಿಕ ಸ್ಥೈರ್ಯ ನೀಡುವುದು ಹಾಗೂ ಆರ್ಥಿಕವಾಗಿ ಸದೃಢರನ್ನಾಗಿಸುವುದು ಇದರ ಮುಖ್ಯ ಉದ್ದೇಶ.

5ನೇ ಪುಟಕ್ಕೆ

# ಗೌರವ ಕಾರ್ಯದರ್ಶಿಗಳ ವರದಿ



ಬಂಟರ ಸಂಘ ಬೆಂಗಳೂರು ನಿರಂತರವಾಗಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಮಾರ್ಚ್ ತಿಂಗಳಲ್ಲಿ ಸಂಘದ ಆವರಣದಲ್ಲಿ ಮೂರು ವಿಭಿನ್ನ ಕಾರ್ಯಕ್ರಮಗಳು ನಡೆದವು.

ಮಹಿಳಾ ವಿಭಾಗವು ಆಯೋಜಿಸಿದ್ದ 'ಧಾತ್ರಿ' ಕಾರ್ಯಕ್ರಮವು ಬಹಳ ವಿಭಿನ್ನವಾಗಿ ನಡೆಯಿತು. ಹಲವು ವಿಚಾರ ಸಂಕಿರಣಗಳು ಮಹಿಳೆಯರಲ್ಲಿ ಇನ್ನಷ್ಟು ಮಾಹಿತಿ ಹಾಗೂ ಉತ್ತೇಜನವನ್ನು ಮೂಡಿಸಿದವು. ಮಹಿಳೆಯರಿಂದ ನಡೆದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ರಂಜಿಸಿತು. ಬಹಳ ವಿಶಿಷ್ಟ ಕಾರ್ಯಕ್ರಮ ಆಯೋಜಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈ ಮತ್ತು ತಂಡದವರಿಗೆ ಅಭಿವಂದನೆಗಳು.

ಸಮಾಜ ಸೇವಾ ಸಮಿತಿ ಮತ್ತು ಬಂಟ್ಸ್ ಸೇವಾದಳ ಆಯೋಜಿಸಿದ ಎಲ್ಲಾ ಸಮಾಜ ಮುಖಿ ಕಾರ್ಯಕ್ರಮಗಳು ಬಹಳ ಅದ್ಭುತವಾಗಿತ್ತು. ಬಂಟ್ ಸಮುದಾಯದ ಅನೇಕರು ಇದರ ಪ್ರಯೋಜನವನ್ನು ಪಡೆದುಕೊಂಡರು. ಇಡೀ ದಿನ ನಡೆದಂತಹ ರಕ್ತದಾನ ಶಿಬಿರ, ವಿವಿಧ ಆರೋಗ್ಯ ಶಿಬಿರ, ಆಯುಷ್ಮಾನ್ ಭಾರತ್, ಬ್ಯಾಂಕಿಂಗ್, ಅರಕ್ಷಣೆ, ಕಾನೂನು ಮಾಹಿತಿ, ಟೆರೇಸ್ ಗಾರ್ಡನ್, ಸುಜೋಕ್ ಅಕ್ಯುಪ್ರೆಶರ್ ಕಾರ್ಯಕ್ರಮಗಳು ಬಹಳ ಅಪರೂಪದ್ದಾಗಿತ್ತು.

ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳೊಂದಿಗೆ CGHS ದರದಲ್ಲಿ ಸಮುದಾಯದ ಆರ್ಥಿಕವಾಗಿ ದುರ್ಬಲರಾದವರಿಗೆ ಚಿಕಿತ್ಸಾ ಸೌಲಭ್ಯದ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಹಲವು ಆಸ್ಪತ್ರೆಯವರು ಬಂಟರ ಸಂಘದೊಂದಿಗೆ ಒಡಂಬಡಿಕೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ಅನೇಕರಿಗೆ ಇದರ ಸದುಪಯೋಗ ಸಿಗಲಿದೆ. ಸಮಾಜ ಸೇವೆಯಲ್ಲಿ ತೊಡಗಿರುವವರನ್ನು ಗುರುತಿಸಿ ಸೇವಾ ಚೇತನ ಗೌರವ ನೀಡಲಾಯಿತು.

ಇದರ ಜೊತೆಗೆ ಇಡೀ ದಿನ ಮೂಡಿ ಬಂದ ಸಾಂಸ್ಕೃತಿಕ ಕಲರವ, ಯಕ್ಷಗಾನ ಕಾರ್ಯಕ್ರಮಗಳು ಜನರನ್ನು ಆಕರ್ಷಿಸಿದವು. ಸಮಾಜ ಸೇವಾ ಸಮಿತಿ ಅಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ಎಂ.ಬಿ, ಸಂಚಾಲಕ ಶ್ರೀ ಅಜಿತ್ ಶೆಟ್ಟಿ ಉಳ್ತೂರು ಇವರಿಗೆ ಅಭಿವಂದನೆಗಳು.

ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿಯು ಸಂಪೂರ್ಣವಾಗಿ ಒಂದು ದಿನವನ್ನು ಯಕ್ಷಗಾನ ತೋರಣವನ್ನು ಆಯೋಜಿಸಿತ್ತು. ಯಕ್ಷಗಾನ ತರಬೇತಿ ಶಾಲೆಯ ಮಕ್ಕಳಿಂದ ಬೆಳಿಗ್ಗೆ ಯಕ್ಷಗಾನ ಪ್ರಾರಂಭವಾಯಿತು. ಮಕ್ಕಳ ಪೋಷಕರು ಮಕ್ಕಳನ್ನು ಕಲೆಗೆ ಪ್ರೋತ್ಸಾಹಿಸಿ, ಮಕ್ಕಳಿಗೆ ಗೆಜ್ಜೆ ಕಟ್ಟಿ ಬಣ್ಣ ತುಂಬಿಸಿ ಯಕ್ಷಗಾನದ ಮೆರುಗನ್ನು ಜನರಿಗೆ ನೀಡಿದರು.

ಸದಸ್ಯರ ಮಹಿಳಾ ಯಕ್ಷಗಾನವಂತೂ ಬಹಳ ವಿಶೇಷವಾಗಿ ಮೂಡಿಬಂತು. ಎಲ್ಲಾ ಮಹಿಳೆಯರು ತಮ್ಮ ತಮ್ಮ ಪಾತ್ರವನ್ನು ಸಂಪೂರ್ಣವಾಗಿ ತುಂಬಿಸಿ ಜನರ ಮನಸೂರೆಗೊಂಡರು. ಸಂಘದ ಸದಸ್ಯರ ಹಾಗೂ ಹವ್ಯಾಸಿ ಕಲಾವಿದರ ಯಕ್ಷಗಾನವು ಪ್ರೇಕ್ಷಕರನ್ನು ಸೆರೆ ಹಿಡಿಯಿತು. ಬಹುಶಃ ಬಂಟರ ಸಂಘದ ಇತಿಹಾಸದಲ್ಲಿ ಯಕ್ಷಗಾನಕ್ಕೆ ಇಷ್ಟೊಂದು ಜನ ಸೇರಿದ್ದು ಜನಾಕರ್ಷಣೆಯಾಗಿದ್ದು ಇತ್ತೀಚಿನ ದಿನಗಳಲ್ಲಿ ಕಂಡಿದ್ದಿಲ್ಲ.

ಸಮಿತಿಯ ಅಧ್ಯಕ್ಷರಾದ ಶ್ರೀ ಗುರುಪ್ರಸಾದ್ ಹೆಗ್ಡೆ, ಸಂಚಾಲಕ ಶ್ರೀ ಸಂತೋಷ್ ಶೆಟ್ಟಿ ಹಾಗೂ ಸದಸ್ಯರೆಲ್ಲರಿಗೂ ಅಭಿನಂದನೆಗಳು.

ಎಪ್ರಿಲ್ 14ರಂದು ಬಿಸು ಕಾರ್ಯಕ್ರಮ ನಡೆಯಲಿದೆ. ಭಾರತದಾದ್ಯಂತ ಅನೇಕ ಬಂಟರ ಸಂಘಗಳು ತಮ್ಮ ಸಾಂಸ್ಕೃತಿಕ ಸ್ಪರ್ಧೆಯನ್ನು ಅಂದಿನ ದಿನ ಅನಾವರಣಗೊಳಿಸಲಿದ್ದಾರೆ. ತಾವೆಲ್ಲರೂ ಇಡೀ ದಿನ ಅಂದಿನ ಕಾರ್ಯಕ್ರಮಕ್ಕೆ ಸಾಕ್ಷಿಯಾಗಬೇಕೆಂದು ತಮ್ಮೆಲ್ಲರಲ್ಲಿ ಸಂಘದ ಪರವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

3ನೇ ಪುಟದಿಂದ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಶೈಕ್ಷಣಿಕ ಸಂಕೀರ್ಣ ಸ್ಥಾಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಕ್ಷೆ ಅನುಮೋದನೆಯನ್ನು ಈಗಾಗಲೇ ಪಡೆಯಲಾಗಿದ್ದು, ನಿರ್ಮಾಣ ಕಾಮಗಾರಿ ಈಗಾಗಲೇ ಆರಂಭಗೊಂಡಿದೆ. ಅತೀ ಶೀಘ್ರವಾಗಿ ನಕ್ಷೆ ಅನುಮೋದನೆ ಪಡೆಯಲು ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿ ಸಹಕರಿಸಿದ ಸಂಘದ ಮಾಜಿ ಗೌರವ ಕಾರ್ಯದರ್ಶಿ, ಸನ್ಮಾನ್ಯ ಕರ್ನಾಟಕ ಲೋಕಾಯುಕ್ತರಾದ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರಿಗೆ ಹೃತ್ಪೂರ್ವಕ ವಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ: ವಿದ್ಯಾಸಂಸ್ಥೆಯಲ್ಲಿ ಪ್ರವೇಶ ಪಡೆಯುವ ಬಂಟ ಮಕ್ಕಳಿಗೆ ಪ್ರವೇಶ ಶುಲ್ಕ (ಡೊನೇಶನ್) ದಲ್ಲಿ ಸಂಪೂರ್ಣ ವಿನಾಯಿತಿ ನೀಡಲಾಗಿದ್ದು, ಪ್ರಸ್ತುತ ಕಲಿಯುತ್ತಿರುವ ಬಂಟ ಮಕ್ಕಳಿಗೆ ಶಾಲಾ ಶುಲ್ಕ (ಟ್ಯೂಶನ್ ಫೀ) ದಲ್ಲಿ ಕಳೆದ 3 ವರ್ಷಗಳಿಂದ ಯಾವುದೇ ಹೆಚ್ಚಳ ಮಾಡಿರುವುದಿಲ್ಲ. ನಮ್ಮದೇ ವಿದ್ಯಾಸಂಸ್ಥೆಯಲ್ಲಿ ಬಂಟ ವಿದ್ಯಾರ್ಥಿಗಳು ಅತ್ಯಂತ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ಪಡೆಯಲಿ ಎನ್ನುವುದು ಶಾಲಾಡಳಿತ ಮಂಡಳಿಯ ಆಶಯ.

ಬಂಟೇತರ ವಿದ್ಯಾರ್ಥಿಗಳಿಗೆ ಕಳೆದ 3 ವರ್ಷಗಳಿಂದ ಶಾಲಾ ಶುಲ್ಕ ಹೆಚ್ಚಳ ಮಾಡದೇ ಇರುವ ಕಾರಣದಿಂದ ಸುಮಾರು 20% (ವರ್ಷಕ್ಕೆ 6.75% ನಂತೆ) ಶುಲ್ಕವನ್ನು ಮಾತ್ರ ಹೆಚ್ಚಳ ಮಾಡಲಾಗಿದೆ. ನಮ್ಮ ಶಾಲೆಗಿಂತ ಕಡಿಮೆ ಮೂಲಭೂತ ಸೌಕರ್ಯ ಹಾಗೂ ಕಡಿಮೆ ಶಿಕ್ಷಣದ ಗುಣಮಟ್ಟವನ್ನು ಹೊಂದಿರುವ ಸುತ್ತಮುತ್ತಲಿನ ಪರಿಸರದ ಶಾಲೆಗಳಿಗೆ ಹೋಲಿಸಿದರೆ ನಾವು ಕಡಿಮೆ ಶಾಲಾ ಶುಲ್ಕದಲ್ಲಿ ಉತ್ತಮ ಶಿಕ್ಷಣ ನೀಡುತ್ತಿದ್ದೇವೆ. ಯಾವುದೇ ಜಾತಿ, ಧರ್ಮ, ಮತ ಭೇದವಿಲ್ಲದೇ ಎಲ್ಲಾ ಸಮುದಾಯದವರಿಗೂ ಅತ್ಯಂತ ಕನಿಷ್ಟ ಶುಲ್ಕದಲ್ಲಿ ಉತ್ತಮ ಶೈಕ್ಷಣಿಕ ಸೇವೆಯನ್ನು ನಮ್ಮ ಸಂಸ್ಥೆ ನೀಡುತ್ತಿರುವುದು ಹೆಮ್ಮೆಯ ಸಂಗತಿ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ವಿಭಾಗ ಆಯೋಜಿಸಿದ ಧಾತ್ರಿ, ಸಮಾಜ ಸೇವಾ ವಿಭಾಗ ಆಯೋಜಿಸಿದ್ದ 'ಸೇವಾ ಚೇತನ' ಹಾಗೂ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ ಆಯೋಜಿಸಿದ್ದ 'ಯಕ್ಷತೋರಣ' ಕಾರ್ಯಕ್ರಮ ಯಶಸ್ವಿಯಾಗಿ ಮೂಡಿ ಬಂದಿದ್ದು, ಕಾರ್ಯಕ್ರಮ ಆಯೋಜಿಸಿದ್ದ ಶ್ರೀಮತಿ ಜಯಶ್ರೀ ಸಿ. ರೈ, ಶ್ರೀ ಉಮೇಶ್ ಶೆಟ್ಟಿ ಎಂ.ಬಿ. ಹಾಗೂ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ ಮತ್ತು ಅವರ ತಂಡದವರನ್ನು ಅಭಿನಂದಿಸುತ್ತೇನೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ – "ಧಾತ್ರಿ" – ಕ್ಷಃ ಕಿರಣ

ದಿನಾಂಕ 9.03.2019ರಂದು ಬೆಂಗಳೂರು ಬಂಟರ ಸಂಘದ ದಿ. ಸುಶೀಲಾ ಪಿ. ಶೆಟ್ಟಿ ವೇದಿಕೆಯಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳನ್ನು ನಮ್ಮ ಸಂಘದ ಚಿಂತನ ಶೀಲ ಮಹಿಳಾ ಸದಸ್ಯರ ಉಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಆಡಳಿತ ಮಂಡಳಿಯ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ವಿದ್ಯುಕ್ತವಾಗಿ ಉದ್ಘಾಟಿಸಿದರು.

ಹೊಸತನದ ಹುಡುಕಾಟ, ನಾಳೆಗಳ ನಿರ್ಮಾಣ, ನಮ್ಮೆಲ್ಲ ಸಹೋದರಿಯರ ಕನಸಾಗಿತ್ತು. ಪ್ರಮುಖವಾಗಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣ, ಭಾವಪೂರ್ಣವಾಗಿಸುವ ನಿಟ್ಟಿನಲ್ಲಿ ನಾಲ್ಕು ವಿಚಾರಧಾರೆಗಳಲ್ಲಿ ಬಿಂಬಿಸಲಾಯ್ತು.

**ಮಹಿಳಾ ಸಂಘಟನೆ, ಸಂಯೋಜನೆ –ವಿಚಾರಧಾರೆಗಳು**
**ಸಮಾಜ ಸೇವಾ ಕೈಂಕರ್ಯ (ಚಾರಿಟೇಬಲ್ ನೆಲೆಗೊಂದು ಬೆಲೆ)**
**ಯುವ ಪ್ರತಿಭೆಗಳಿಗೆ ಪ್ರೋತ್ಸಾಹ–ಸನ್ಮಾನ**

**ಮನರಂಜನಾ ಕಾರ್ಯಕ್ರಮ**

ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ ಮತ್ತು ತಂಡದವರಿಂದ ಪ್ರಾರ್ಥನೆಯ ನಂತರ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈಯವರಿಂದ ಸ್ವಾಗತ, ಬಂಟರ ಹಾಡಿನೊಂದಿಗೆ ದೀಪ ಬೆಳಗಿಸುವಿಕೆ, ಸಂಘದ ಬಾಲಿಕೆಯರಿಂದ ಮೋಹಕ ಸ್ವಾಗತ ನೃತ್ಯ.

ವಿಚಾರ ಸಂಕಿರಣದ ಪ್ರಥಮಪಾದ "ಉದ್ಯಮ ಕ್ಷೇತ್ರದಲ್ಲಿ ಮಹಿಳೆ" ಪ್ರಥಮ ಮಹಿಳಾ ಹೋಟೆಲ್ ಉದ್ಯಮಿ, ಶ್ರೀಮತಿ ಪದ್ಮಾ ಶೇಷಾದ್ರಿ ಹಾಗೂ ಪ್ರಕೃತಿ ಹರ್ಬಲ್ಸ್ ಬೆಂಗಳೂರಿನ ಶ್ರೀಮತಿ ನೀತಾ ಅಡಪ, ಇವರು ಭಾಗವಹಿಸಿದ ಸಂವಾದದಲ್ಲಿ ಶ್ರೀಮತಿ ಮಂಜುಳ ಶೆಟ್ಟಿ ಸಂಭಾಷಣಕಾರ್ತಿಯಾಗಿ ಉಪಯುಕ್ತ ಮಾಹಿತಿಗಳ ಅನಾವರಣಕ್ಕಾಗಿ ಮುಕ್ತ






ಚರ್ಚೆಯಲ್ಲಿ ಸಹಕರಿಸಿದರು. ಉದ್ಯಮದ ಆಳ ಅಧ್ಯಯನ, ಪರಿಶ್ರಮ, ಧೈರ್ಯ, ಹಣಕಾಸಿನ ವ್ಯವಹಾರಗಳು, ಜೊತೆಯಲ್ಲಿ ಸ್ಪರ್ಧೆ– ಎಲ್ಲಾ ಸಮಸ್ಯೆಗಳಿಗೆ ಸಮರ್ಪಕ ಉತ್ತರ ನೀಡಿದರು. ಮಹಿಳೆಯರಿಗೆ ಸಾಕಷ್ಟು ವಿಚಾರಧಾರೆಗಳ ವಿಮರ್ಶಾತ್ಮಕ ಸಂಯೋಜನೆ ಈ ವಿಚಾರ ಸಂಕಿರಣದಿಂದ ದೊರೆಯಿತು. ಮನರಂಜನಾ ಕಾರ್ಯಕ್ರಮದಲ್ಲಿ ಮೂಡಿಬಂದ ಶೋಭಾ ಅಪಾರ್ಟ್‌ಮೆಂಟಿನ ಮಹಿಳಾ ಸದಸ್ಯರ ನೃತ್ಯ ರೂಪಕ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಉಡುಪಿಯಿಂದ ಆಗಮಿಸಿದ ಮಹಿಳಾ ಚೆಂಡೆವಾದಕಿಯುರು ಸಾಂದರ್ಭಿಕವಾಗಿ ವಾದನದೊಂದಿಗೆ ರಂಜಿಸಿದರು.

ಎರಡನೇ ವಿಚಾರ ಸಂಕಿರಣ "ದೃಶ್ಯ ಹಾಗೂ ಮುದ್ರಣ ಮಾಧ್ಯಮದಲ್ಲಿ ಮಹಿಳೆ" ಪ್ರಜಾವಾಣಿಯ ಹಿರಿಯ ಪತ್ರಕರ್ತೆ ಶ್ರೀಮತಿ ರೋಹಿಣಿ ಶೆಟ್ಟಿ ಮುಂಡಾಜೆ, ಹಾಗೂ ನ್ಯೂಸ್ 18 ಬೆಂಗಳೂರು ಸಂಪಾದಕರು ಮತ್ತು ವಿಶೇಷ ತನಿಖಾ ಸಂಪಾದಕರು ಶ್ರೀಮತಿ ವಿಜಯಲಕ್ಷ್ಮೀ ಶಿಬರೂರು ಇವರೊಂದಿಗೆ ಶ್ರೀಮತಿ ರೇವತಿ ಶೆಟ್ಟಿಯವರು ನಡೆಸಿಕೊಟ್ಟ ಸಂವಾದ ಸಭಾಸದರನ್ನು ರೋಮಾಂಚನಗೊಳಿಸಿತು. ವಿಜಯಲಕ್ಷ್ಮೀ ಶಿಬರೂರು ತನ್ನ ವೃತ್ತಿಯಲ್ಲಿ ಸಮಾಜದ ಹುಳುಕನ್ನು ಎತ್ತಿ ಹಿಡಿಯುವ ಕ್ಲಿಷ್ಟಕರ ಸನ್ನಿವೇಶಗಳನ್ನು ಎಳೆ ಎಳೆಯಾಗಿ ವಿಶ್ಲೇಷಿಸಿದರು. ರೋಹಿಣಿ ಶೆಟ್ಟಿ ಮುಂಡಾಜೆಯವರು ರಾತ್ರಿ ಪಾಳಿ ಕೆಲಸ, ವರ್ಗಾವಣೆ, ಸಾಂಸಾರಿಕ ಜೀವನದೊಂದಿಗೆ ಸಾಮರಸ್ಯಗಳ ಒಳಹೊರ ಗುಟ್ಟನ್ನು ಸಾದರ ಪಡಿಸಿದರು. ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಈರ್ವರೂ ನೀಡಿ ಮಹಿಳಾ ದಿನಾಚರಣೆಗೊಂದು ಹೊಸ ಆಯಾಮ ಸೃಷ್ಟಿಸಿದರು. ಭಾಗ್ಯದ ಬಳೆಗಾರ ಮತ್ತು ಮಹಿಳಾ ಸ್ವಾವಲಂಬನೆಯನ್ನು ಬಿಂಬಿಸುವ ನೃತ್ಯ ರೂಪಕ ಎಲ್ಲರ ಮನಸೂರೆಗೊಂಡಿತು.

ಮೂರನೇ ಹಾಗೂ ಕೊನೆಯ ವಿಚಾರ ಸಂಕಿರಣ–

"ಸೌಂದರ್ಯ ಮತ್ತು ಫ್ಯಾಶನ್ ಜಗತ್ತಿನಲ್ಲಿ ಮಹಿಳೆ". ಡಾ। ವಿಭಾ ಶೆಟ್ಟಿ ಸಮನ್ವಯಕಾರರಾಗಿ ನಡೆಸಿದ ಸಂವಾದದಲ್ಲಿ ಖ್ಯಾತ ಚರ್ಮ ಮತ್ತು ಸೌಂದರ್ಯ ತಜ್ಞೆ ಡಾ। ರಶ್ಮಿ ರೈ ಹಾಗೂ ಖ್ಯಾತ ವಸ್ತ್ರವಿನ್ಯಾಸಕಿ ಮತ್ತು ಫ್ಯಾಷನ್ ಲೇಬಲ್ ಹ್ಯೂವೇನ್‌ನ ಸಹ ಸಂಸ್ಥಾಪಕರಾದ ಶೈಮಾ ಶೆಟ್ಟಿ ಹಲವಾರು ಉಪಯುಕ್ತ ಮಾಹಿತಿಗಳನ್ನು ಹಾಗೂ ಸಲಹೆಗಳನ್ನು ನೀಡಿದರು.

ದಾಸರಹಳ್ಳಿಯ ಬಂಟ ಮಹಿಳೆಯರು ಪ್ರಸ್ತುತ ಪಡಿಸಿತ ತಾಯಿ ಮಗುವಿನ ಕುರಿತ 'ಖುದಾ ಕಿ ದುವಾ" ನೃತ್ಯ ರೂಪಕ ಸಭಾಸದರನ್ನು ಮಂತ್ರಮುಗ್ಧರನ್ನಾಗಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಂತರದಲ್ಲಿ ಬಂಟ ಮಹಿಳಾ ವಸತಿ ಗೃಹದ ಮಹಿಳೆಯರು 'ಉಲ್ಟಾ ಪಲ್ಟಾ' ಕಿರು ಹಾಸ್ಯ ಪ್ರಹಸನ ಸಾದರಪಡಿಸಿದರು. ಗೀತಾ ಎಲ್.ಎನ್ ಶೆಟ್ಟಿಯವರು ನಡೆಸಿಕೊಟ್ಟ ಹೌಸಿ ಹೌಸಿ ಕಾರ್ಯಕ್ರಮ ಆಕರ್ಷಣೀಯವಾಗಿತ್ತು. ಸಭಾ ಕಾರ್ಯಕ್ರಮಕ್ಕೆ ವೇದಿಕೆ ಸಿದ್ಧಗೊಳಿಸುತ್ತಿದ್ದಂತೆಯೇ ಬಂಟ್ಸ್ ಬಾಲಕಿಯರು ಪ್ರಸ್ತುತ ಪಡಿಸಿದ ಕಾರ್ತಿಕ್ ನಿರ್ದೇಶನದ ಕಥಕ್ ನೃತ್ಯ ಆಕರ್ಷಕವಾಗಿ ಮೂಡಿಬಂದು ಎಲ್ಲರ ಮನಸೂರೆಗೊಂಡಿತು.

ಸಭಾ ಕಾರ್ಯಕ್ರಮದಲ್ಲಿ ಮಿಶನ್ ಡೈರೆಕ್ಟರ್ ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಮಿಶನ್ ಡಾ। ಮಮತ ಬಿ. ಆರ್ ಐ.ಎ.ಎಸ್ ರವರು ಮುಖ್ಯ ಅತಿಥಿಯಾದರೆ ಗೌರವ ಅತಿಥಿಯಾಗಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶರು ಶ್ರೀಮತಿ ವಿನೀತಾ ಪಿ. ಶೆಟ್ಟಿ, ಹಾಗೂ ಖ್ಯಾತ ಆರೋಗ್ಯ ಮತ್ತು ದೇಹದಾರ್ಢ್ಯ ತಜ್ಞೆ ಶ್ರೀಮತಿ ವನಿತಾ ಅಶೋಕ್, ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ವಹಿಸಿದ್ದರು. ಸಂಘದ ಪ್ರಥಮ ಉಪಾಧ್ಯಕ್ಷರಾದ ಶ್ರೀ ಭೋಜರಾಜ್ ಶೆಟ್ಟಿ, ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ಅಮೃತ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ಶ್ರೀ ದೀಪಕ್ ಶೆಟ್ಟಿ, ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈ ಉಪಸ್ಥಿತರಿದ್ದರು. ಶ್ರೀಮತಿ ಮೀರಾ ಕೆ. ಶೆಟ್ಟಿ ಮತ್ತು ತಂಡದವರಿಂದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಆರಂಭಗೊಂಡಿತು. ಡಾ। ಮಮತಾ ತನ್ನ ಅಪಾರ ಅನುಭವವನ್ನು ತೆರೆದಿಟ್ಟು ಸ್ವೀಡನ್, ಪಾಕಿಸ್ತಾನ ಮೊದಲಾದ ಜಗತ್ತಿನ ಹಲವಾರು ದೇಶಗಳ ಮಹಿಳೆಯರ ವಿಚಾರಧಾರೆಗಳನ್ನು ಸಾದರ ಪಡಿಸಿದರು. ಗ್ರಾಮೀಣ ಮಹಿಳೆಯರನ್ನು ಸ್ವಾವಲಂಬಿ ಮಹಿಳೆಯನ್ನಾಗಿಸಿದ ತನ್ನ ಯಶಸ್ವೀ ಪ್ರಯತ್ನಗಳ ಚಿತ್ರಣವನ್ನು ನಿರೂಪಿಸಿದರು. ವಿಶೇಷವಾಗಿ ನೆರೆದ ಎಲ್ಲರೂ ಎದ್ದು ನಿಂತು ಉನ್ನತಿಗಾಗಿ ಸಮಭಾವದ ಪ್ರತಿಜ್ಞಾ ವಿಧಿ ನೆರವೇರಿಸಿದರು.

ಗೌರವ ಅತಿಥಿ ಶ್ರೀಮತಿ ವಿನೀತಾ ಪಿ. ಶೆಟ್ಟಿಯವರು ಮಹಿಳೆಯರ ಸಮಸ್ಯೆಗಳನ್ನು ವಿಶ್ಲೇಷಿಸಿದರು. ಶ್ರೀಮತಿ ವನಿತಾ ಅಶೋಕ್ ವಿಶೇಷವಾಗಿ ಮಹಿಳೆಯರಿಗೆ ವ್ಯಾಯಾಮದ ಮಹತ್ವವನ್ನು ವಿವರಿಸಿದರು.

ಅಖಿಲ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಶ್ರೀಮತಿ ವನಮಾಲ ಸಂಪನ್ನ ಕುಮಾರ್‌ರನ್ನು ಆದರದಿಂದ ಸನ್ಮಾನಿಸಲಾಯಿತು.

ಮಹಿಳಾ ದಿನಾಚರಣೆಯನ್ನು ವೈಶಿಷ್ಟ್ಯಪೂರ್ಣವಾಗಿಸುವ ನಿಟ್ಟಿನಲ್ಲಿ ಕಾರ್ಕಳದ ವಿಜೇತ ವಿಶೇಷ



ಮಕ್ಕಳ ಶಾಲೆಯ ಡಾ। ಕಾಂತಿ ಹರೀಶ್‌ರನ್ನು ಆಹ್ವಾನಿಸಿ ಸನ್ಮಾನಿಸಿ ಬೆಂಗಳೂರು ಬಂಟರ ಸಂಘದ 60ರ ಸಂಭ್ರಮದ ನೆನಪಿಗಾಗಿ ರೂ 60 ಸಾವಿರ ನೆರವು ನೀಡಲಾಯಿತು. ಬಂಟ ಮಹಿಳೆಯರಿಗೆ ಆದರ್ಶಪ್ರಾಯರಾಗಿರುವ ಆದಾಯ ತೆರಿಗೆ ಇಲಾಖೆ ಸಹಾಯಕ ಆಯುಕ್ತರಾದ ಕುಮಾರಿ ನಿವ್ಯಾ ಪಿ. ಶೆಟ್ಟಿ, ಐ.ಆರ್.ಎಸ್. ಮತ್ತು ಕರ್ನಾಟಕ ಲೆಕ್ಕ ಪತ್ರ ಇಲಾಖೆಯ ಉಪನಿರ್ದೇಶಕರಾದ ಕುಮಾರಿ ಕವಿತಾ ಪಿ. ಶೆಟ್ಟಿ ಅವರು ಗೌರವ ಸಮರ್ಪಣೆ ಸ್ವೀಕರಿಸಿದರು.

ಉದಯೋನ್ಮುಖ ಪ್ರತಿಭೆಗಳಾದ ರಾಷ್ಟ್ರೀಯ ವೈಟ್ ಲಿಫ್ಟಿಂಗ್ ಕ್ರೀಡಾಪಟು ಕುಮಾರಿ ಲಾವಣ್ಯ, ರಾಷ್ಟ್ರೀಯ ಬಾಸ್ಕೆಟ್ ಬಾಲ್ ಕ್ರೀಡಾಪಟು ಕುಮಾರಿ ಲೇಖನ ಹೆಗ್ಡೆ, ಅಂತರರಾಷ್ಟ್ರೀಯ ನೃತ್ಯಪಟು ಕುಮಾರಿ ನಿಧಿ ಶೆಟ್ಟಿ, ಅಂತರರಾಷ್ಟ್ರೀಯ ಯೋಗಪಟು ಕುಮಾರಿ ಅನನ್ಯ ವಿ. ಶೆಟ್ಟಿ ಇವರನ್ನು ಸ್ಮರಣಿಕೆ ಹಾಗೂ ಗೌರವ ಧನದೊಂದಿಗೆ ಪ್ರೋತ್ಸಾಹಿಸಲಾಯಿತು.

ಸಮಾರಂಭದಲ್ಲಿ ಅಂತರರಾಷ್ಟ್ರೀಯ ನೃತ್ಯಪಟು ಉದಯೋನ್ಮುಖ ಪ್ರತಿಭೆ ಕುಮಾರಿ ನಿಧಿ ಶೆಟ್ಟಿ ಅದ್ಭುತ ನೃತ್ಯಪ್ರದರ್ಶನ ನೀಡಿದಳು. ಕಾರ್ಯಕ್ರಮದ ಕೊನೆಯಲ್ಲಿ ಡ್ಯಾನ್ಸ್ ಇಂಡಿಯಾ ಡ್ಯಾನ್ಸ್ ಖ್ಯಾತಿಯ ನೃತ್ಯ ಪಟು, ಯಕ್ಷಗಾನ

ಕಲಾವಿದೆ ಕುಮಾರಿ ಅದ್ವಿಕಾ ಶೆಟ್ಟಿ ನಡೆಸಿಕೊಟ್ಟ ಮೈನವಿರೇಳಿಸುವ ನೃತ್ಯ ಕಾರ್ಯಕ್ರಮ ನೆರೆದ ಬಂಧುಗಳನ್ನು ಆಶ್ಚರ್ಯ ಚಕಿತರಾಗಿಸಿತು. ಇನ್ನೂ 12ರ ಕುವರಿ ದೇಶ ವಿದೇಶಗಳಲ್ಲಿ 750ಕ್ಕೂ ಮಿಕ್ಕಿದ ಪ್ರದರ್ಶನಗಳನ್ನು ನೀಡಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ನಮ್ಮೊಂದಿಗಿದ್ದು ಬೆಂಗಳೂರು ಬಂಟರ ಬಂಧುಗಳಿಗೆ ಸಂತಸ ನೀಡಿದಳು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಸಮಯೋಚಿತ ಸಮಾರೋಪ ಭಾಷಣಗೈದು ಮಹಿಳಾ ವಿಭಾಗದ ಸದಸ್ಯೆಯರು ಸಂಘದ ಶೈಕ್ಷಣಿಕ ಯೋಜನೆಗಳಿಗೆ ಪ್ರೀತಿ ಪೂರ್ವಕವಾಗಿ ನೀಡಿದ 1 ಲಕ್ಷ ರೂ ವನ್ನು ಸ್ವೀಕರಿಸಿದರು. ಸಂಚಾಲಕಿ ಯೋಗ್ಯ ಎಲ್. ರೈ ಧನ್ಯವಾದ ಗೈದರು. ಶ್ರೀಮತಿ ಶಮಿತಾ ಲಕ್ಷ್ಮೀ ಮತ್ತು ಶೃತಿಕ ಶೆಟ್ಟಿಯವರು ನಿರೂಪಣೆಗೈದರು.

**ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳ ವಿವರ**

| | |
|---|---|
| ಡಾ। ಜಗನ್ನಾಥ ಮೇಲಾಂಟ | ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ |
| ಶ್ರೀಮತಿ ಮಮತ ಸತೀಶ್ ಶೆಟ್ಟಿ | ಶ್ರೀ ಬಿ. ಸುಧಾಕರ ಹೆಗ್ಡೆ |
| ಶ್ರೀ ಧೀರಜ್ ಕುಮಾರ್ ಶೆಟ್ಟಿ | ಶ್ರೀ ದೀಪಕ್ ಶೆಟ್ಟಿ |
| ಮಾಂಡೋವಿ ಮೋಟಾರ್ಸ್ ಪ್ರೈ. ಲಿ | ಶ್ರೀ ರವಿ ಕುಮಾರ್ |
| ಯಶಸ್ ಸೆಕ್ಯೂರಿಟಿ ಮತ್ತು ಎಲೈಡ್ ಸರ್ವಿಸಸ್ | ಪಿ. ವಿ ಎಂಟರ್ ಪ್ರೈಸಸ್ |
| ಶ್ರೀ ಎಚ್. ಲೋಕೇಶ್, ಬೆನಕ ಕನ್‌ಸ್ಟ್ರಕ್ಷನ್ಸ್ | ಶ್ರೀ ಸುರೇಂದ್ರ ಶೆಟ್ಟಿ |
| ಶ್ರೀ ರಮಾನಂದ ಶೆಟ್ಟಿ, ಗ್ರೂಪ್ ಫಾರ್ಮಸೂಟಿಕಲ್ಸ್ ಲಿ. | ಶ್ರೀರಾಮ್ ಜ್ಯುವೆಲ್ಲರ್ಸ್ |
| ಭೀಮಾ ಜ್ಯುವೆಲ್ಲರ್ಸ್ | ಶ್ರೀ ಜಗನ್ನಾಥ ಶೆಟ್ಟಿ ಪೂನಾ |
| ಶ್ರೀ ಅರುಣ್ ಶೆಟ್ಟಿ . ಶೆಟ್ಟಿ ಎಂಡ್ ಎಸೋಸಿಯೇಟ್ಸ್ | ಶ್ರೀಮತಿ ಸುಜಾತ ಉದಯ ಹೆಗ್ಡೆ |
| ಶ್ರೀಮತಿ ಗೀತಾಂಜಲಿ ಅಜಿಲ | ಶ್ರೀಮತಿ ಶ್ಯಾಮಲ ಶೆಟ್ಟಿ |
| ಶ್ರೀಮತಿ ಶೋಭಾ ಶೆಟ್ಟಿ | ಶ್ರೀಮತಿ ಗೀತಾ ಶೆಟ್ಟಿ |
| ಶ್ರೀಮತಿ ಜಯಶ್ರೀ ಸಿ. ರೈ | ಶ್ರೀಮತಿ ಯೋಗ್ಯ ಎಲ್. ರೈ |
| ಶ್ರೀಮತಿ ಸಬಿತ ಎ. ಮಲ್ಲಿ | ಶ್ರೀಮತಿ ಸರ್ವಾಣಿ ಗಿರೀಶ್ ರೈ |
| ಶ್ರೀಮತಿ ಕುಶಲ ಬಾಲಕೃಷ್ಣ ರೈ | ಶ್ರೀಮತಿ ಹೀರಾ ಹರೀಶ್ ಶೆಟ್ಟಿ |
| ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಶ್ರೀನಿಧಿ ಎಂಟರ್‌ಪ್ರೈಸಸ್ | ಡಾ। ವೈ. ಉಮಾನಾಥ್ ಶೆಟ್ಟಿ |
| ಶ್ರೀ ರವೀಂದ್ರನಾಥ್ ಮಾರ್ಲ | ಶ್ರೀಮತಿ ವಿಜಯಲಕ್ಷ್ಮೀ ಸುರೇಂದ್ರ ಶೆಟ್ಟಿ ಕೊಡ್ಲಾಡಿ |
| ಶ್ರೀಮತಿ ಜ್ಯೋತಿ ಸುರೇಂದ್ರ ಶೆಟ್ಟಿ | ಕೊರ್ಗಿ ಗೋಪಾಲ ಶೆಟ್ಟಿ |
| ಶ್ರೀಮತಿ ಮಲ್ಲಿಕಾ ಕೇಶವ ಶೆಟ್ಟಿ | ಶ್ರೀಮತಿ ಮಮತ ವಿಜಯಕುಮಾರ್ ಶೆಟ್ಟಿ |
| ಶ್ರೀ ಭಾಸ್ಕರ ಶೆಟ್ಟಿ | ಶ್ರೀಮತಿ ಪ್ರೀತಿ ಅರವಿಂದ ಶೆಟ್ಟಿ–ಹಿತ್ತಾಳೆಯ ಹಣ್ಣಿನ ಬುಟ್ಟಿ |
| ಶ್ರೀಮತಿ ಶಮಿತಲಕ್ಷ್ಮೀ ಶೆಟ್ಟಿ–ಸ್ಟೇಜ್ ಅಲಂಕಾರ | ಶ್ರೀಮತಿ ವಿಜಯಲಕ್ಷ್ಮೀ ಶಾಂತರಾಮ ಶೆಟ್ಟಿ– ಆಮಂತ್ರಣ ಪತ್ರಿಕೆ |

ಶ್ರೀಮತಿ ಅಮೃತ ಎಸ್. ಶೆಟ್ಟಿ – ಕಲಾವಿದರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ



## ಅಭಿನಂದನೆಗಳು

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮಹಿಳೆಯರ ಅಭಿವೃದ್ಧಿಗಾಗಿ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಕಾರ್ಕಳದ 'ವಿಜೇತ ವಿಶೇಷ ಮಕ್ಕಳ ಶಾಲೆ'ಯ ಡಾ। ಕಾಂತಿ ಎಸ್. ಶೆಟ್ಟಿಯವರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

# ಸಮಾಜದಲ್ಲಿ ಸೇತುವೆಯಾಗಿ ಕೆಲಸ ಮಾಡಿ ; ಗೋಡೆಯಾಗಬೇಡಿ

**ಡಾ। ಸಿ. ಎನ್ ಮಂಜುನಾಥ್**

ಜೀವನ ಶೈಲಿ ಆಧಾರಿತ ಕಾಯಿಲೆಗಳು, ಮಾನಸಿಕ, ಸಾಂಸರಿಕ ಒತ್ತಡಗಳು ಹೆಚ್ಚಾಗಿರಲು ಕಾರಣ ಅವಿಭಾಜ್ಯ ಕುಟುಂಬಗಳು ಕಡಿಮೆಯಾಗಿರುವುದು. ಆ ಕಾಲದಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಮನೆಯೇ ಸಮುದಾಯ ಭವನ, ಮನೆಯೇ ಸಾಂತ್ವನ ಕೇಂದ್ರವಾಗಿದ್ದು, ಸಂಸಾರಗಳು ಸುಖವಾಗಿ ಸಾಗುತ್ತಿದ್ದವು ಎಂದು



ಜಯದೇವ ಹೃದ್ರೋಗ ಸಂಸ್ಥೆ ಬೆಂಗಳೂರಿನ ಮುಖ್ಯ ವೈದ್ಯಾಧಿಕಾರಿಗಳಾದ ಡಾ। ಸಿ. ಎನ್ ಮಂಜುನಾಥ್ ರವರು ಬಂಟರ ಸಂಘದ ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ವತಿಯಿಂದ ಆಯೋಜಿಸಿದ ಸೇವಾ ಚೇತನ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಮಾತನಾಡಿ ಬಂಟರ ಸಂಘದ ಸಮಾಜ ಮುಖಿ ಕಾರ್ಯಗಳಲ್ಲಿ ಎಲ್ಲರೂ ಜೊತೆಯಾಗಬೇಕು. ಆ ಮೂಲಕ ಸಂಘ ಮತ್ತು ಸಮುದಾಯದ ಏಳಿಗೆಗೆ ಎಲ್ಲರೂ ಕೈಜೋಡಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಸಮಾಜ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡ ಬಂಟರ ಸಂಘದ ಹಿರಿಯರು, ದಾನಿಗಳೂ ಆದ ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ, ಪರಿಹಾರ್ ಸಂಸ್ಥೆಯ ಮೂಲಕವಾಗಿ ನೊಂದ ಮಹಿಳೆಯರ ಮತ್ತು ಮಕ್ಕಳ ಪಾಲಿನ ಆಶಾಕಿರಣವಾಗಿ ನಿಂತ ಶ್ರೀಮತಿ ರಾಣಿ ಶೆಟ್ಟಿ ಮತ್ತು ಉಡುಪಿ ಪರಿಸರದಲ್ಲಿ ಆಪತ್ಬಾಂದವ ಎನಿಸಿಕೊಂಡಿರುವ ಸಮಾಜ ಸೇವಕ ಶ್ರೀ ವಿಶು ಶೆಟ್ಟಿ ಅಂಬಲಪಾಡಿ ಇವರಿಗೆ ಸೇವಾ ಚೇತನ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಶ್ರೀಮತಿ ಪುಷ್ಪ ಕುಶಲ್ ಹೆಗ್ಡೆ ಗೌರವ ಅತಿಥಿಗಳಾಗಿ ಭಾಗವಹಿಸಿ ಸಮಾಜ ಏಳಿಗೆಯಲ್ಲಿ ಮಹಿಳೆಯರ ಪಾತ್ರ ಮತ್ತು ಆಕೆಗೆ ಸಿಗಬೇಕಾದ ಸಹಕಾರದ ಬಗ್ಗೆ ವಿವರಿಸಿದರು. ಇದೇ ಸಂದರ್ಭದಲ್ಲಿ ಜೀವನಕ್ಕಾಗಿ ಕಾಮಧೇನು ಯೋಜನೆಯ 7 ಫಲಾನುಭವಿಗಳಿಗೆ ಸಹಾಯಧನವನ್ನು ವಿತರಿಸಲಾಯಿತು. ಬಂಟ ಸಮಾಜದ ಅರ್ಹರಿಗೆ ಕೇಂದ್ರ ಸರ್ಕಾರ ನಿರ್ಧರಿತ (CGHS) ದರದಲ್ಲಿ ಚಿಕಿತ್ಸೆ ಕೊಡಿಸುವ ನಿಟ್ಟಿನಲ್ಲಿ ಬೆಂಗಳೂರಿನ ಪ್ರತಿಷ್ಠಿತ 19 ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಆಸ್ಪತ್ರೆಗಳ ಮುಖ್ಯಸ್ಥರು, ಮುಖ್ಯ ವೈದ್ಯಾಧಿಕಾರಿಗಳು ಹಾಗೂ ಬಂಟರ ಸಂಘದ ಅಧ್ಯಕ್ಷರು, ಗೌರವ ಕಾರ್ಯದರ್ಶಿ, ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್‌ರವರ ಉಪಸ್ಥಿತಿಯಲ್ಲಿ ಒಡಂಬಡಿಕಾ ಹಸ್ತಾಂತರ ಕಾರ್ಯಕ್ರಮ ನೆರವೇರಿತು.

ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ವತಿಯಿಂದ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಣಿಪಾಲ ಆಸ್ಪತ್ರೆ, ಎಸ್ ಎಸ್ ಎನ್ ಎಂ ಸಿ,

ಬೆಂಗಳೂರು ಕ್ಯಾನ್ಸರ್, ಕರ್ನಾಟಕ ಕ್ಯಾನ್ಸರ್, ಕಿದ್ವಾಯಿ ಆಸ್ಪತ್ರೆ, ಸ್ಪೈನ್ ಕೇರ್ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳು ಭಾಗವಹಿಸಿದ್ದು, 2100 ಕ್ಕೂ ಅಧಿಕ ಜನರಿಗೆ ಆರೋಗ್ಯ ತಪಾಸಣೆ ಮತ್ತು ಸೂಕ್ತ ಸಲಹೆಗಳನ್ನು ನೀಡಲಾಯಿತು.

UIDAI ಸಹಯೋಗದೊಂದಿಗೆ ನಡೆದ ಆಧಾರ್ ನೊಂದಾವಣಿ ಮತ್ತು ತಿದ್ದುಪಡಿ ಕಾರ್ಯಕ್ರಮದಲ್ಲಿ 190 ಕ್ಕೂ ಅಧಿಕ ಆಧಾರ್ ನೋಂದಾವಣಿ ಮತ್ತು ತಿದ್ದುಪಡಿ ಮಾಡಿಕೊಡಲಾಯಿತು. ಸೇವಾ ಸಿಂಧು ಇಲಾಖಾ ಸಹಯೋಗದೊಂದಿಗೆ 1400 ಕ್ಕೂ ಮಿಕ್ಕಿ ಸಮಾಜ ಬಾಂಧವರು ಮತ್ತು ಸಾರ್ವಜನಿಕರಿಗೆ ಹಿರಿಯ



ನಾಗರಿಕರ ಚೀಟಿ, ಆರೋಗ್ಯ ಕಾರ್ಡ್, ಬೇಕರಿ ಮತ್ತು ಆಹಾರ ಪರವಾನಿಗೆ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಯಿತು.

ಬಂಟರ ಸಂಘದ ಇತಿಹಾಸದಲ್ಲಿ ದಾಖಲೆಯ 251 ಯುನಿಟ್ ರಕ್ತ ಸಂಗ್ರಹಣೆ ಮಾಡಿ ರಾಷ್ಟ್ರೋತ್ಥಾನ ಪ್ರತಿಷ್ಠಾನದ ರಕ್ತ ನಿಧಿಗೆ ಹಸ್ತಾಂತರಿಸಲಾಯಿತು.

ಆರೋಗ್ಯ ವಿಮೆ ಹಾಗೂ ಆರೋಗ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇದರ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಾಗಾರ ನಡೆಯಿತು. ಮನೆಯ ಮೇಲ್ಚಾವಣಿಯಲ್ಲಿ ತೋಟಗಾರಿಕೆ ಕುರಿತು ಶ್ರೀ ಉಮೇಶ್ ಶೆಟ್ಟಿ ತರಬೇತಿ ನೀಡಿದರು. ಬ್ಯಾಂಕಿಂಗ್ ಸೌಲಭ್ಯಗಳ ಕುರಿತಾಗಿ ಶ್ರೀ ಭಾಸ್ಕರ ಶೆಟ್ಟಿಯವರು ಕಾರ್ಯಾಗಾರವನ್ನು ನಡೆಸಿಕೊಟ್ಟರು.

ನಮ್ಮ ಸಂಘದ ಸದಸ್ಯರು ಮತ್ತು ಆಹ್ವಾನಿತ ಕಲಾವಿದರು ನಡೆಸಿಕೊಟ್ಟ ಮಹಿಷ ಮರ್ಧಿನಿ ನೃತ್ಯ ರೂಪಕ, ನೃತ್ಯ ಜುಗಲ್ ಬಂದಿ, ಜಡೆ ಕೋಲಾಟ, ಕಂಸಾಳೆ, ಜಾನಪದ ನೃತ್ಯ, ಮೂಕಾಭಿನಯ, ಭರತನಾಟ್ಯ, ವಿವಿಧ ಸಾಧಕರ ಸಾಧನೆಯ ಕುರಿತು ಫ್ಯಾಶನ್ ಶೋ, ನಗೆ ಹಬ್ಬ ಇವೆಲ್ಲವೂ ಜನರ ಮೆಚ್ಚುಗೆಗೆ ಪಾತ್ರವಾಯಿತು. ಬಡಗುತಿಟ್ಟಿನ ಪ್ರಸಿದ್ಧ ಕಲಾವಿದರು ಮತ್ತು ಸಂಘದ ಸದಸ್ಯರ ಕೂಡುವಿಕೆಯಲ್ಲಿ ನಡೆದ ಯಕ್ಷಗಾನ – ಅಭಿಮನ್ಯು ಯಕ್ಷ ಪ್ರಿಯರ ಮನ ತಣಿಸಿತು.

ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಶೆಟ್ಟಿ ಎಂ.ಬಿ ಪ್ರಾಸ್ತಾವಿಕ ಮಾತುಗಳನ್ನಾಡಿ ಸಮಿತಿಯ ಉದ್ದೇಶಗಳು, ಕಾರ್ಯವೈಖರಿಯ ಬಗ್ಗೆ ವಿವರಣೆ ನೀಡಿದರು.

ಸೇವಾ ಚೇತನ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಹಿಂದಿ ಮಜ್ದೂರ್ ಸಭಾದ ಅಧ್ಯಕ್ಷರಾದ ಶ್ರೀ ಆರ್. ವಿ ಹರೀಶ್‌ರವರು ಉದ್ಘಾಟಿಸಿ ಬಂಟರ ಸಮಾಜದೊಂದಿಗಿನ ತನ್ನ ನಂಟು, ಬಂಟರ ಸಾಹಸ, ಕಾರ್ಯ ತತ್ಪರತೆಯ ಬಗ್ಗೆ ಮಾತನಾಡಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಸೇವಾಂಜಲಿ ಪ್ರತಿಷ್ಠಾನ ಪರಂಗಿಪೇಟೆ ಇದರ ಮುಖ್ಯಸ್ಥರು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ಕೃಷ್ಣ ಕುಮಾರ್ ಪೂಂಜ ಮಾತನಾಡಿ ಸಮಾಜ ಸೇವೆಯ ಬಗೆಗಿನ ಅವರ ತುಡಿತವನ್ನು ಸಭಿಕರಿಗೆ ವಿವರಿಸಿದರು.

ಬೆಂಗಳೂರಿನ ವಿವಿಧ ಭಾಗಗಳಲ್ಲಿರುವ ಬಂಟರನ್ನು ಒಗ್ಗೂಡಿಸುವುದು ಮತ್ತು ತುರ್ತು ಸಂದರ್ಭಗಳಲ್ಲಿ ಅವರಿಗೆ ನೆರವಾಗುವ ನಿಟ್ಟಿನಲ್ಲಿ ನೂತನ ಪರಿಕಲ್ಪನೆಯೊಂದಿಗೆ ಆರಂಭಿಸಿದ ಸೇವಾದಳದ ಉದ್ಘಾಟನೆಯನ್ನು ಸೇವಾದಳದ ಧ್ವಜವನ್ನು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಸಮಾಜ ಸೇವಾದಳದ ಚೇರ್‌ಪರ್ಸನ್ ಶ್ರೀ ಉಮೇಶ್\



ಶೆಟ್ಟಿಯವರಿಗೆ ಹಸ್ತಾಂತರಿಸುವ ಮೂಲಕ ನೆರವೇರಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ರೇವತಿ ಶೆಟ್ಟಿ, ಶ್ರೀ ಸುಹಾಸ್ ಶೆಟ್ಟಿ ಮುಟ್ಲುಪಾಡಿ, ಕುಮಾರಿ ಪ್ರಜ್ಞಾ ಭಂಡಾರಿಯವರು ಅಚ್ಚು ಕಟ್ಟಾಗಿ ನಿರ್ವಹಿಸಿದರು.



ಸಹಾಯ ಹಸ್ತ ಕಾರ್ಯಕ್ರಮಕ್ಕೆ ಗ್ರಾಮೀಣ ಭಾಗದ ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಾಗ್ರಿಗಳನ್ನು ವಿತರಿಸುವ ಸಲುವಾಗಿ ಸುಮಾರು 1,000 ಕ್ಕೂ ಅಧಿಕ ನೋಟ್ ಪುಸ್ತಕಗಳು ಮತ್ತು 80,000 ಹಣ ಸಂಗ್ರಹಿಸಲಾಯಿತು.

ಉಟೋಪಚಾರದ ವ್ಯವಸ್ಥೆಯನ್ನು ಮಾಡಿದ ಶ್ರೀ ಭಾಸ್ಕರ್ ಶೆಟ್ಟಿ ಇಸ್ಕಾನ್ ಹಾಗೂ ಶ್ರೀ ನವೀನ್ ಶೆಟ್ಟಿಯವರಿಗೆ ಸಂಘದ ಪರವಾಗಿ ಅಭಿನಂದನೆಗಳು. ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಪ್ರತಿಯೋರ್ವರಿಗೂ ಧನ್ಯವಾದಗಳು.

**ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳು**

ಡಾ। ಶೆಟ್ಟೀಸ್, SSNMC Multi Speciality Hospital
ಶ್ರೀ ಅನಿಲ್ ಕುಮಾರ್ ಎಂ. ಆರ್, ಬೆಂ. ಕ್ಯಾನ್ಸರ್ ಆಸ್ಪತ್ರೆ
ಶ್ರೀ ಸುರೇಂದ್ರ ಶೆಟ್ಟಿ, ಸ್ಪೈನ್ ಕೇರ್ & ಆರ್ಥೋ ಕೇರ್ ಆಸ್ಪತ್ರೆ
ಶ್ರೀ ಶಿವರಾಮ್ ರೆಡ್ಡಿ
ಶ್ರೀ ಪ್ರಥಿನ್ ಶೆಟ್ಟಿ
ಚಿಗುರು ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರು
ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಶ್ರೀನಿಧಿ ಎಂಟರ್‌ಪ್ರೈಸಸ್
ಶ್ರೀ ಸಚಿನ್ ನ್ಯಾಕ್
ಶ್ರೀ ಕರುಣಾಕರ ಹೆಗ್ಡೆ ಆನಗಳ್ಳಿ
ಶ್ರೀ ಬಿ. ಆನಂದರಾಮ ಶೆಟ್ಟಿ
ಎಸೆನ್‌ಶಿಯಲ್ ಆಸ್ಪತ್ರೆ, ಬೆಂಗಳೂರು
ಶ್ರೀ ರಮಿತ್ ಬಿ. ಶೆಟ್ಟಿ
ಐ ನರ್ಸ್
ಶ್ರೀ ಜ್ಯೋತಿ ಪ್ರಸಾದ್ ಹೆಗ್ಡೆ, ಮೆಡ್‌ಲ್ಯಾಬ್
ಶ್ರೀ ಎಂ. ಆರ್ ರಾಮ್‌ಪ್ರಸಾದ್
ಶ್ರೀ ಕೃಷ್ಣ ಆಸ್ಪತ್ರೆ
ಉಷಾ ಆಸ್ಪತ್ರೆ
ಶ್ರೀ ಜಯರಾಮ್ ಯು. ಕೆ
ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ
ಶ್ರೀ ಉದಯ ಶೆಟ್ಟಿ
ಶ್ರೀ ಸುದೀಪ್ ನಾಯಕ್
ಶ್ರೀ ವಿಶ್ವನಾಥ್ ಶೆಟ್ಟಿ
ನಿರುಪಮ ಕೆ. ಹೆಗ್ಡೆ
ಶ್ರೀ ಸುಕೇಶ್ ಹೆಗ್ಡೆ
ಶ್ರೀ ಸತೀಶ್ ಶೆಟ್ಟಿ, ಮಾತಾ ಕನ್‌ಸ್ಟ್ರಕ್ಷನ್ ನಾಗರಭಾವಿ
ಶ್ರೀ ವಿಠಲ್ ಕೆ, ಎಲ್.ಐ.ಸಿ
ಮಿಂಡಾ ಕ್ಯೋರಾಕು ಲಿ.
ಶ್ರೀ ಸಂತೋಷ್ ಶೆಟ್ಟಿ, ಕೆನರ ಹೈಡ್ರೋಲಿಕ್ಸ್

## ಬಂಟ್ ಆರೋಗ್ಯ ಸಹಾಯವಾಣಿ (24 X 7)

ನಮ್ಮ ಸಮಾಜ ಬಾಂಧವರ ಆರೋಗ್ಯ ಸಮಸ್ಯೆಗಳಿಗೆ ನೆರವಾಗುವ ನಿಟ್ಟಿನಲ್ಲಿ ಬಂಟ್ ಆರೋಗ್ಯ ಸಹಾಯವಾಣಿ ತೆರೆಯಲಾಗಿದೆ. ಬಂಟರ ಸಂಘ ಒಡಂಬಡಿತ ಆಸ್ಪತ್ರೆಗಳಲ್ಲಿನ ಚಿಕಿತ್ಸೆ ಮತ್ತು ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು 24 x 7 ಈ ಕೆಳಗಿನ ಸಂಖ್ಯೆಯನ್ನು ಸಂಪರ್ಕಿಸಬಹುದು.

**ಸಹಾಯವಾಣಿ ಸಂಖ್ಯೆ: 8296055108**

# ಬಂಟರ ಸಂಘ ಬೆಂಗಳೂರು

## ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ–ಯಕ್ಷತೋರಣ

ಮಾರ್ಚ್ 31.03.2019 ರಂದು (ಮಾರ್ಚ್ ಮಾಹೆಯ ಕೊನೆಯ ದಿನ) ನಮಗೆಲ್ಲಾ ಅರ್ಥಿಕ ವರ್ಷದ ಕೊನೆಯ ದಿನ, ಆದರೆ ಅಂದು ನಾವು ನಮ್ಮ ಸಂಘದಲ್ಲಿ ಹೊಸ ಯಕ್ಷಗಾನ ಪರ್ವದ ನಾಂದಿ ಹಾಡಿ ಸಂಭ್ರಮಿಸಿದೆವು. ಕರಾವಳಿಯ ಯಕ್ಷಗಾನ ಕಲೆಗೆ ಬಹಳ ಹಿಂದಿನಿಂದಲೂ ಬಂಟರು ಕಲಾವಿದರಾಗಿ, ಕಲಾಪೋಷಕರಾಗಿ ಅನನ್ಯ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಇದನ್ನೇ ಮುಂದುವರಿಸಿಕೊಂಡು ಬರುತ್ತಿರುವ ಬೆಂಗಳೂರಿನ ಬಂಟರ ಸಂಘವು ಯಕ್ಷಗಾನ ತರಬೇತಿ ಹಾಗೂ ಪ್ರದರ್ಶನಗಳ ಮೂಲಕ ಸದಸ್ಯರ ಕಲಾಸಕ್ತಿಯನ್ನು ತಣಿಸುತ್ತಿದ್ದು ತವರಿನ ನೆನಪನ್ನು ಹಸಿರಾಗಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ.

ಬಂಟರ ಸಂಘದ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯು ನಡೆಸಿಕೊಟ್ಟ "ಯಕ್ಷತೋರಣ" ಒಂದು ಅವಿಸ್ಮರಣೀಯ ಕಾರ್ಯಕ್ರಮವಾಗಿ ಹೊರಹೊಮ್ಮಿತು. ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದ ದಿ| ಕೆದಂಬಾಡಿ ಜತ್ತಪ್ಪ ರೈ ವೇದಿಕೆಯಲ್ಲಿ ವಿಶಿಷ್ಟವಾಗಿ ರೂಪುಗೊಂಡಂತಹ ಸುಂದರವಾಗಿ ಅಲಂಕೃತವಾದ ಸಾಂಪ್ರದಾಯಿಕ ರಂಗಸ್ಥಳದಲ್ಲಿ ಬೆಳಗಿನ 10.30ಕ್ಕೆ ಚೌಕಿ ಪೂಜೆಯ ಆರಂಭದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು, ಆಡಳಿತ ಮಂಡಳಿಯ ಸದಸ್ಯರು, ನಮ್ಮ ಉಪಸಮಿತಿಯ ಅಧ್ಯಕ್ಷರಾದ ಶ್ರೀ ಗುರುಪ್ರಸಾದ್ ಹೆಗ್ಡೆ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ದೀಪವನ್ನು ಬೆಳಗಿಸುವುದರ ಮೂಲಕ ಕಾ0ರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಸಂಘದಲ್ಲಿ ತರಭೇತಿ ಪಡೆಯುತ್ತಿರುವ ಬಾಲಕಲಾವಿದರಿಂದ ಮೊದಲನೆಯ ಪ್ರದರ್ಶನ "ರತಿ ಕಲ್ಯಾಣ" ಸುಂದರವಾಗಿ ಮೂಡಿಬಂತು. ಪುಟ್ಟ ಪುಟಾಣಿಗಳು ಪುರಾಣ ಪ್ರಸಂಗದ ಪ್ರಬುದ್ಧ ಸಂಭಾಷಣೆಗಳನ್ನು ಸುಲಲಿತವಾಗಿ ಪ್ರಸ್ತುತಪಡಿಸಿ ಭವಿಷ್ಯದ ಭರವಸೆಗಳಾಗಿ ಗೋಚರಿಸಿದರು. "ವಿದ್ಯುನ್ಮತಿ ಕಲ್ಯಾಣ" ಪ್ರಸಂಗವನ್ನು ರಂಗದ ಮೇಲೆ ಪ್ರಸ್ತುತಪಡಿಸಿದವರು ಸಂಘದಲ್ಲಿ ತರಬೇತಿ ಪಡೆಯುತ್ತಿರುವ ಮಹಿಳಾ ಕಲಾವಿದರು. ತಮ್ಮ ನಿರಂತರ ಪರಿಶ್ರಮದಿಂದ ಗಂಡು ಕಲೆಯನ್ನು ತಮ್ಮದಾಗಿಸಿಕೊಳ್ಳುತ್ತಿರುವ ಅವರ ಈ ಪ್ರದರ್ಶನ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.



ಸಂಜೆಯ ಸಭಾಕಾರ್ಯಕ್ರಮದಲ್ಲಿ ಭಾಗವಹಿಸಿದ ಅತಿಥಿಗಳಾದ, ಕರ್ನಾಟಕ ರಾಜ್ಯ ಅಡಿಟ್ ಮತ್ತು ಅಕೌಂಟ್ಸ್‌ನ ಅಡಿಷನಲ್ ಡೈರೆಕ್ಟರ್ ಶ್ರೀ ಅಜಿತ್ ಕುಮಾರ್ ಹೆಗ್ಡೆ ಶಾನಾಡಿ, ಬೆಂಗಳೂರಿನ ಉದ್ಯಮಿ ಶ್ರೀ ಆನಗಳ್ಳಿ ಕರುಣಾಕರ ಹೆಗ್ಡೆ, ಮುಂಬೈ ಮಾತೃ ಭೂಮಿ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿ ಅಧ್ಯಕ್ಷರಾದ ಮುಂಡ್ಕೂರು ಶ್ರೀ ರತ್ನಾಕರ ಶೆಟ್ಟಿ ಮತ್ತು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಸಂದರ್ಭೋಚಿತವಾಗಿ ಮಾತನಾಡಿ ಹುರಿದುಂಬಿಸಿದರು. ಕಾರ್ಯಕ್ರಮದ ಪೋಷಕರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಇತ್ತೀಚೆಗೆ ನಿಧನರಾದ ಸಂಘದ ಸಕ್ರಿಯ ಸದಸ್ಯರಾಗಿದ್ದ ಹವ್ಯಾಸಿ ಯಕ್ಷಗಾನ ಕಲಾವಿದ ಶ್ರೀ ಸುರೇಂದ್ರ ಶೆಟ್ಟಿಯವರ ಕಲಾಸೇವೆಯನ್ನು ನೆನಪಿಸಿ ಅರ್ಪಿಸಿದ ಗೌರವ ಧನವನ್ನು ಅವರ ಪುತ್ರ ಶ್ರೀ ವರುಣ್ ಶೆಟ್ಟಿಯವರು ಸ್ವೀಕರಿಸಿದರು. ಉಪಸಮಿತಿಯ ಅಧ್ಯಕ್ಷರಾದ ಶ್ರೀ ಗುರುಪ್ರಸಾದ್ ಹೆಗ್ಡೆಯವರು ಸ್ವಾಗತಿಸಿ, ಸಂಚಾಲಕರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿಯವರು ವಂದಿಸಿದರು. ಶ್ರೀ ಉಳ್ತೂರು ಅಜಿತ್ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಬಹುಜನರ ನಿರೀಕ್ಷೆಯ "ದೇವಿ ಮಹಾತ್ಮೆ" ಆ ದಿನದ ಕೊನೆಯ ಆಟ. ಕಿಕ್ಕಿರಿದ ಪ್ರೇಕ್ಷಕರ ಸಮ್ಮುಖದಲ್ಲಿ ಸಂಘದ ತೆಂಕು ಮತ್ತು ಬಡಗಿನ ಹವ್ಯಾಸಿ ಕಲಾವಿದರು ಹಾಗೂ ವೃತ್ತಿಪರ ಕಲಾವಿದರ ಕೂಡುವಿಕೆಯಲ್ಲಿ, ದಿವಂಗತ ಕಾಳಿಂಗ ನಾವುಡರ ಶೈಲಿಯಲ್ಲಿ ಹಾಡುವ ಸಂಘದ ಸದಸ್ಯರಾದ ಶ್ರೀ ವಿನಯ್ ಶೆಟ್ಟಿ, ಸುಶ್ರಾವ್ಯ ಕಂಠದ ಭಾಗವತರಾದ ಶ್ರೀ

ಸುರೇಶ್ ಶೆಟ್ಟಿ ಮತ್ತು ತೆಂಕಿನ ಗಂಡು ಧ್ವನಿಯ ಗಾನ ಕೋಗಿಲೆ ಕುಮಾರಿ ಕಾವ್ಯಶ್ರೀ ಅಜೇರು ಅವರ ಮೈ ಮನ ರೋಮಾಂಚನಗೊಳಿಸುವ ಹಾಡುಗಾರಿಕೆಯ ವೈಭವದಲ್ಲಿ ಅಭೂತಪೂರ್ವವಾಗಿ ಮೂಡಿಬಂದ ಪ್ರಸಂಗ ಯಕ್ಷಲೋಕವನ್ನೇ ಸೃಷ್ಟಿಸಿತು. ಜೊತೆಗೆ ಶ್ರೀ ಎ. ಪಿ ಪಾಠಕ್, ಶ್ರೀ ಕಾರ್ತಿಕೇಯ ಮತ್ತು ಶ್ರೀ ವೆಂಕಟೇಶ್ ಹೆಗಡೆಯವರು ಹಿಮ್ಮೇಳದಲ್ಲಿ ಸಹಕರಿಸಿದರು.

"ರತಿ ಕಲ್ಯಾಣ" ಮತ್ತು "ವಿದ್ಯುನ್ಮತಿ ಕಲ್ಯಾಣ" ಪ್ರಸಂಗಗಳು ನಮ್ಮ ಸಂಘದ ಯಕ್ಷಗಾನ ತರಬೇತುದಾರರಾದ ಶ್ರೀ ಬೇಗಾರ್ ಶಿವಕುಮಾರ್ ಅವರ ದಕ್ಷ ಸಂಯೋಜನೆಯೊಂದಿಗೆ ನೆರವೇರಿತು.

ಮಧ್ಯಾಹ್ನ ಮತ್ತು ರಾತ್ರಿಯ ಸರಳ ಊಟ ಮತ್ತು ಸಂಜೆಯ ಲಘು ಉಪಾಹಾರದ ವ್ಯವಸ್ಥೆಯನ್ನು ಉಪಸಮಿತಿಯ ವತಿಯಿಂದ ಮಾಡಲಾಗಿತ್ತು.

ಸಮಾಜ ಬಾಂಧವರೆಲ್ಲರ ನಿರೀಕ್ಷೆಯನ್ನು ಮೀರಿಸಿದ ಕಾರ್ಯಕ್ರಮದ ಯಶಸ್ಸನ್ನು ಯಕ್ಷ ಪ್ರೇಮಿಗಳಾದ ನಿಮಗೆಲ್ಲರಿಗೂ ಅರ್ಪಿಸುತ್ತಾ ಯಕ್ಷ ತೋರಣಕ್ಕೆ "ಮಂಗಳ" ಪದ ಹಾಡೋಣವೇ?





**॥ ಕರದೊಳು ಪಾಶುಪತಾಸ್ತ್ರವ ಧರಿಸಿದ.... ॥**

**ಯಕ್ಷ ತೋರಣ ಕಾರ್ಯಕ್ರಮಕ್ಕೆ ದೇಣಿಗೆ ಮತ್ತು ಪ್ರಾಯೋಜಕತ್ವ ನೀಡಿದ ಯಕ್ಷ ಪ್ರೇಮಿಗಳು**

ಶ್ರೀ ದೀಪಕ್ ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀ ಸುಧಾಕರ ಶೆಟ್ಟಿ
ಶ್ರೀ ಹೆ. ಎಸ್ ರಾಘವೇಂದ್ರ ಶೆಟ್ಟಿ
ಶ್ರೀ ಭಾಸ್ಕರ ಶೆಟ್ಟಿ, ಸಾಂತೂರು
ಶ್ರೀ ಜೆ.ಪಿ ಶೆಟ್ಟಿ, ಕಿಂಗ್ಸ್ ಕಿಚನ್
ಶ್ರೀ ಸುಧಾಕರ್ ಶೆಟ್ಟಿ, ಶ್ರೇಯಸ್ ಸಿರಾಮಿಕ್ಸ್
ಶ್ರೀ ರಘುರಾಮ್ ಶೆಟ್ಟಿ
ಶ್ರೀ ಶಂಕರ್ ಶೆಟ್ಟಿ
ಶ್ರೀ ಸುಬ್ರಹ್ಮಣ್ಯ ಶೆಟ್ಟಿ
ಶ್ರೀ ಸುರೇಶ್ ಶೆಟ್ಟಿ ಜಪ್ತಿ
ಆರ್ & ಎಸ್ ಟರ್ನ್ ಕೀ ಕಾಂಟ್ರಕ್ಟರ್
ಶ್ರೀ ಸಂತೋಷ್ ಶೆಟ್ಟಿ ಸಿಪ್ & ಡೈನ್
ಶ್ರೀ ನಗರ ನಾಗರಾಜ್ ಶೆಟ್ಟಿ
ಶ್ರೀ ಮೋಹನ್ ಶೆಟ್ಟಿ
ಶ್ರೀ ಶಶಿಕಾಂತ ಶೇಖ
ಶ್ರೀ ಅಮರನಾಥ್ ಶೆಟ್ಟಿ
ಶ್ರೀಮತಿ ಸುನೀತಾ ಜೆ. ಶೆಟ್ಟಿ

ಶ್ರೀ ಸಂದೀಪ್ ಹೆಗ್ಡೆ
ಶ್ರೀ ಉದಯ ಕುಮಾರ್ ಹೆಗ್ಡೆ
ಶ್ರೀ ವಿನಯ ಶೆಟ್ಟಿ
ಸುನಂದ ಆರ್. ಶೆಟ್ಟಿ
ಶ್ರೀ ರವಿತೇಜ
ಶ್ರೀ ಚಂದ್ರಶೇಖರ ಶೆಟ್ಟಿ
ಶ್ರೀ ರಮಿತ್ ಬಿ. ಶೆಟ್ಟಿ
ಶ್ರೀ ಪ್ರದೀಪ್ ಶೆಟ್ಟಿ
ಶ್ರೀ ಸತೀಶ್ ಶೆಟ್ಟಿ, ಅಲಂಕಾರ್ ಟೈಲ್ಸ್
ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ
ಶ್ರೀ ಶ್ರೀನಿವಾಸ್ ಸೂಡ
ಶ್ರೀ ರಾಜೇಶ್ ಶೆಟ್ಟಿ
ಶ್ರೀ ಸುರೇಶ್ ಕೆ. ಶೆಟ್ಟಿ
ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ
ಶ್ರೀ ಸುಭಾಷ್ ಶೆಟ್ಟಿ
ಶ್ರೀ ಅರವಿಂದ್ ಶೆಟ್ಟಿ
ಶ್ರೀ ಆನಗಳ್ಳಿ ಕರುಣಾಕರ ಹೆಗ್ಡೆ
ಶ್ರೀಮತಿ ಸುಜಾತ ಎಸ್. ಶೆಟ್ಟಿ

ಶ್ರೀ ಸದಾನಂದ ಶೆಟ್ಟಿ
ಶ್ರೀ ಜೀವನ್ ಶೆಟ್ಟಿ
ಶ್ರೀ ಬಾಲಕೃಷ್ಣ ಚೌಟ
ಶ್ರೀ ವಿನಯ್ ಶೆಟ್ಟಿ
ಶ್ರೀ ರಂಜಿತ್ ಕುಮಾರ್ ಶೆಟ್ಟಿ
ಶ್ರೀ ಉಮೇಶ್ ಕುಮಾರ್ ಶೆಟ್ಟಿ
ಶ್ರೀ ಪ್ರತಾಪ್ ಶೆಟ್ಟಿ
ಶ್ರೀ ಹೆಚ್. ವಿ ಸುಧಾಕರ್ ಶೆಟ್ಟಿ
ಶ್ರೀ ಕೃಷ್ಣ ಎನ್. ಶೆಟ್ಟಿ
ಶ್ರೀ ಸುಧಾಕರ್ ಶೆಟ್ಟಿ, ಕೂಲ್ ಕಾರ್ನರ್
ಶ್ರೀ ಸಂತೋಷ್ ಶೆಟ್ಟಿ ಮೈತ್ರಿ
ಶ್ರೀ ಸಿ.ಎ. ವಿಜಯ್ ಶೆಟ್ಟಿ
ಶ್ರೀ ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ವಿಶ್ವನಾಥ ಶೆಟ್ಟಿ ಕೆ.
ಶ್ರೀ ಉದಯಕುಮಾರ್ ಶೆಟ್ಟಿ
ಶ್ರೀ ದಿನೇಶ್ ಹೆಗ್ಡೆ
ಶ್ರೀ ಮುಕ್ತಾ ಯು. ಶೆಟ್ಟಿ

# ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು

ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು ಕೃಷಿ ಪ್ರಧಾನವಾದ ಬಂಟ ಸಮಾಜದ ಎಲ್ಲಾ ಆಚರಣೆಗಳೂ, ಹಬ್ಬಗಳೂ ಕೃಷಿಗೆ ಸಂಬಂಧಪಟ್ಟವುಗಳೇ ಆಗಿವೆ. ಹಿಂದೆ ಕೂಡು ಕುಟುಂಬಗಳಿದ್ದ ಕಾಲದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತಿದ್ದ ಹಬ್ಬಗಳ ಸಡಗರ, ಸಂಭ್ರಮ ಕ್ರಮೇಣ ಕ್ಷೀಣಿಸುತ್ತಿದ್ದು ಕೃಷಿಯಂತೆಯೇ ಮರೆಯಾಗುತ್ತಿದೆಯೇನೋ ಎನ್ನುವ ಆತಂಕವಿದೆ. ಹಿರಿಯರಿಗೆ ಗತವೈಭವವನ್ನು ನೆನಪಿಸಿಕೊಳ್ಳಲು ಮತ್ತು ನವಪೀಳಿಗೆಗೆ ನಮ್ಮ ಆಚರಣೆಗಳ ವೈಶಿಷ್ಟ್ಯದ ಸೊಬಗನ್ನು ಮನದಟ್ಟು ಮಾಡುವುದಕ್ಕಾಗಿ ಈ ಅಂಕಣ. ಪ್ರಾದೇಶಿಕ ಹಾಗೂ ಭಾಷಿಕ ಭಿನ್ನತೆಗಳು ಆಚರಣೆಗಳಲ್ಲೂ ಪ್ರತಿಫಲಿಸುತ್ತವಾದ್ದರಿಂದ ಇಲ್ಲಿ ತುಳುನಾಡಿನ ದಕ್ಷಿಣ ಹಾಗೂ ಉತ್ತರ ಭಾಗಗಳ ಸಂಪ್ರದಾಯಗಳನ್ನು ಬೇರೆ ಬೇರೆಯಾಗಿ ಚಿತ್ರಿಸಲಾಗಿದೆ.

**– ಸಂಪಾದಕಿ**

## ಗಡಿನಾಡಿನ ಬಿಸು

ಸೂರ್ಯನು ಮೀನ (ಸುಗ್ಗಿ) ರಾಶಿಯಿಂದ ಮೇಷ (ಪಗ್ಗು) ರಾಶಿಗೆ ಬರುವ ದಿವಸವೇ ಬಿಸು (ವಿಷು / ಸೌರ ಯುಗಾದಿ). ಉತ್ತರ ಭಾರತದ ವೈಶಾಕಿ ಕರಾವಳಿಯ ವಿಷುವಾಗಿ ಆಚರಿಸಲ್ಪಡುತ್ತದೆ. ಸುಗ್ಗಿಯ ಕಾಲದ ಬೇಸಾಯ ಮುಗಿದು, ಮುಂಬರುವ ಮಳೆಗಾಲದ ಬೇಸಾಯಕ್ಕೆ ಅಣಿಯಾಗುವುದು, ಹೊಸ ವರ್ಷಕ್ಕೆ ಹೊಸ ಹರ್ಷದಲ್ಲಿ ಹೊಸ ಬಟ್ಟೆಯಲ್ಲಿ ಎದುರುಗೊಳ್ಳುವ ಪವಿತ್ರ ಹಬ್ಬವೇ ವಿಷು. ಎಪ್ರಿಲ್ 14ರಂದು ಹಳೆಕಾಲದ ಬರಗಾಲದ ಮತ್ತು ಬಡತನದ ದಿನಗಳಲ್ಲಿ ಈ ವಿಷು ಪರ್ವವು ಸಕಲರಿಗೂ ಸುಖಃ ಮತ್ತು ಸಮೃದ್ಧ ಬೆಳೆ ಬೆಳೆದ ಕಾಲವಾಗಿದ್ದು ಜನರು ಸಂಪದ್ಭರಿತರಾಗಿ ತುಂಬಾ ಸಂತೋಷದಲ್ಲಿ ಇರುವ ಸಮಯವಾಗಿತ್ತು.

ಕಾಸರಗೋಡಿಗೆ ಸೇರಿದ ತುಳುನಾಡಿನ ಭಾಗದಲ್ಲಿ ವಿಷು ಅಥವಾ ತುಳುವಿನ ಬಿಸು ಪರ್ಬದ ಆಚರಣೆ ತುಂಬಾ ಸಂಪ್ರದಾಯ ಬದ್ಧವಾಗಿರುತ್ತದೆ. ಪ್ರಾತಃಕಾಲ ಎದ್ದು ಸ್ನಾನ ಮಾಡಿ ಮನೆ ಹಿರಿಯರು ದೈವದ ಕೋಣೆಯ ಬಳಿಯಲ್ಲಿ ತಾವು ಬೆಳೆದ ಹಣ್ಣು ತರಕಾರಿಗಳನ್ನು ಒಪ್ಪವಾಗಿ ಜೋಡಿಸಿ ಅದರ ಮೇಲೊಂದು ದರ್ಪಣವನ್ನು ಇಟ್ಟು (ಕಣಿ) ದೀಪ ಬೆಳಗಿಸುತ್ತಾರೆ. ಬೆಳಿಗ್ಗೆ ಎದ್ದ ಕೂಡಲೇ "ಕಣಿ" ನೋಡಿ ಹಿರಿಯರ ಕಾಲಿಗೆ ನಮಸ್ಕಾರ ಮಾಡಿ ಆಶೀರ್ವಾದ ತೆಗೆದುಕೊಂಡ ಮೇಲೆ ಹಿರಿಯರ ಗೋರಿಗೆ ಹೋಗಿ ನಮಸ್ಕಾರ ಮಾಡುವುದು ವಾಡಿಕೆ. ಮನೆಯ ಯಜಮಾನ ತಾನು ಸಾಕಿದ ಎತ್ತು ಅಥವಾ ಕೋಣಗಳನ್ನು ಬಿಸಿಲ ಝಳಕ್ಕೆ ಒಣಗಿದ ಗದ್ದೆಗೆ ತೆಗೆದುಕೊಂಡು ಹೋಗಿ ಸಾಂಕೇತಿಕವಾಗಿ ಮೂರು ಬರೆ ಎಳೆಯುವ ಪದ್ಧತಿಯಿದೆ. ಮೂರು ಬರೆ ಎಂದರೆ ಎತ್ತುಗಳನ್ನು ಹೂಡಿ ಮೂರು "ಬೊರಿ ಮಾದಾವುನೆ" ಎನ್ನುತ್ತಾರೆ ತುಳುವರು. ಆ ಮೂರು ಗೆರೆಯ ಮೂರು ಬೊರಿ ಮೇಲೆ ಮೂರು ಜಾಗದಲ್ಲಿ ಒಂದಿಷ್ಟು ಹಟ್ಟಿಗೊಬ್ಬರ ಮತ್ತು ಹಿಡಿ ಹಸಿ ಸೊಪ್ಪು ಹಾಕಿ ಹರಿವಾಣದಲ್ಲಿ ಒಂದು ಮುಷ್ಟಿ ಭತ್ತದ ಬೀಜವನ್ನು ಬಿತ್ತನೆ ಮಾಡಿ ಆ ವರ್ಷದ ಕೃಷಿಗೆ ನಾಂದಿ ಹಾಡುತ್ತಾರೆ. ಬಿತ್ತನೆಗೆ ಇನ್ಯಾವ ಮುಹೂರ್ತ ನೋಡುವ ಅವಶ್ಯಕತೆಯಿಲ್ಲ.

ತದ ನಂತರ ತುಂಬಾ ಬೇಗನೆ ಹಬ್ಬದೂಟವನ್ನು ಬಾಳೆ ಎಲೆಯಲ್ಲಿ ಸವಿಯುವುದು ವಾಡಿಕೆ. ಕುಚ್ಚಲು ಅಕ್ಕಿ ಅನ್ನ, ಸೌತೆಕಾಯಿ ಸಾಂಬಾರು, ಹಸಿ ಗೇರು ಬೀಜ ಮತ್ತು ಮೊಳಕೆ ಕಟ್ಟಿದ ಹೆಸರು ಕಾಳು ಗಸಿ, ಕಡಲೆ ಕಾಳು ಮತ್ತು ಒಣಗಿದ ಬಲ್ಯಾರು (ಶಾರ್ಕ್) ಮೀನು ಪಲ್ಯ, ತೊಂಡೆಕಾಯಿ ಪಲ್ಯ ಹಾಗೂ ಪಾಯಸ ಇರಲೇಬೇಕು. ಊಟ ಮುಗಿಸಿ ನಂತರ ಸ್ನೇಹಿತರ ಮತ್ತು ಸಂಬಂಧಿಕರ ಮನೆಗೆ ತೆರಳಿ ಶುಭಾಶಯಗಳನ್ನು ಅರ್ಪಿಸಿ ಅಲ್ಲಿಯೂ ಸ್ವಲ್ಪ ಭೋಜನವನ್ನು ಸೇವಿಸಿ ಹಿಂತಿರುಗುತ್ತಾರೆ. ಅಂದು ಸಾಲ, ದವಸ ಧಾನ್ಯಗಳು, ಅಥವಾ ನಗದನ್ನು ಬೇರೆಯವರಿಗೆ ಕೊಡುವುದಾಗಲೀ, ಮನೆಯ ಸದಸ್ಯ ಬೇರೆ ಮನೆಯಲ್ಲಿ ಉಳಿದುಕೊಳ್ಳುವುದಾಗಲೀ, ಪರ ಊರಿಗೆ ಪ್ರವಾಸ ಮಾಡುವುದಾಗಲೀ, ನಮ್ಮ ಸ್ವಾಧೀನದ ಯಾವುದೇ ಜಮೀನು ಯಾ ವಸ್ತುವನ್ನು ವಿಕ್ರಯ ಮಾಡುವುದು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಹೆಚ್ಚಿನ ಪ್ರದೇಶಗಳಲ್ಲಿ ದೇವಾಲಯದಲ್ಲಿ ಧ್ವಜವನ್ನು ಏರಿಸುವುದು (ಕೊಡಿ ಏರುಣೆ) ಸಂಪ್ರದಾಯ. ತುಳುವರಿಗೆ ವಿಷು ಹಬ್ಬದಷ್ಟು ವಿಶಿಷ್ಟ ಹಬ್ಬ ಬೇರಿಲ್ಲ. ಹೊಸ ವರ್ಷದಲ್ಲಿ ಸ್ವಾಗತಕ್ಕೆ ನಿಲ್ಲುವುದು ಬಿಸು ಪರ್ಬ. ಬಿಸು ಪರ್ಬದಲ್ಲಿ ಎಲ್ಲಾ ಜನರಿಗೆ ದೇವರು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ತುಳುವರ ಹಾರೈಕೆ.

**ಸೀತಾರಾಮ ಶೆಟ್ಟಿ ಮಾಣೂರು**

## "ಕುಂದಾಪುರದ ಯುಗಾದಿ / ಆರೂಡ್ ಹಬ್ಬ"

ಸಾಮಾನ್ಯವಾಗಿ ಕೆಲವು ಹಬ್ಬಗಳನ್ನು ಒಂದೊಂದು ಊರಿನಲ್ಲಿ ಬೇರೆ ಬೇರೆ ಹೆಸರಿನಿಂದ ಬೇರೆ ಬೇರೆ ರೀತಿಯಲ್ಲಿ ಆಚರಿಸುತ್ತಾರೆ. ಅವುಗಳಲ್ಲಿ ವರ್ಷದ ಆದಿಯಲ್ಲಿ ಬರುವ ಹಬ್ಬವೇ ಯುಗಾದಿ (ಬಿಸು).

ಸೂರ್ಯನು ಮೀನ ರಾಶಿಯನ್ನು ಬಿಟ್ಟು ಮೇಷ ರಾಶಿಯನ್ನು ಪ್ರವೇಶಿಸುವ ಸಂಕ್ರಮಣ ದಿನವೇ ಸೌರಮಾನ ಯುಗಾದಿ ಅಥವಾ ಬಿಸು ಸಂಕ್ರಮಣವಾಗಿರುತ್ತದೆ. ಯುಗಾದಿ ಎಂದರೆ ಯುಗ+ಆದಿ ಅಂದರೆ ವರ್ಷದ ಪ್ರಾರಂಭ. ಈ ದಿನವನ್ನು ನಾವು ಹೊಸ ವರ್ಷವೆಂದು ಆಚರಿಸುತ್ತೇವೆ.

ಕುಂದಾಪುರ ಕಡೆಯಲ್ಲಿ ಈ ಹಬ್ಬವನ್ನು ಯುಗಾದಿ ಅಲ್ಲದೇ "ಆರೂಡ್ ಹಬ್ಬ" ಎಂತಲೂ ಕರೆಯುತ್ತಾರೆ. ಹಳ್ಳಿಯಲ್ಲಿ ಹಬ್ಬದ ಹಿಂದಿನ ದಿನ ಸಂಜೆ ಒಣ ಹುಲ್ಲಿನಲ್ಲಿ ಹೊಟ್ಟನ್ನು (ತಿರುಳಿಲ್ಲದ ಭತ್ತ) ತುಂಬಿಸಿ ಅದನ್ನು ಗೋಲಾಕಾರವಾಗಿ ಸುತ್ತಿ ಪಿಂಡಿ ತಯಾರಿಸಿ ಇಡುತ್ತಾರೆ. ಇದಕ್ಕೆ "ಹೊಟ್ಟಿನ ಪಿಂಡಿ" ಎನ್ನುತ್ತಾರೆ. ಹಬ್ಬದ ದಿನ ಮನೆಯ ಯಜಮಾನ ಸೂರ್ಯೋದಯಕ್ಕೆ ಮೊದಲು ಎದ್ದು ಗದ್ದೆಗೆ ಹೋಗಿ ಗದ್ದೆಯನ್ನು 5 ಅಥವಾ 6 ಸುತ್ತು ಉಳುತ್ತಾನೆ. ಬಹುಶಃ 6 ಸುತ್ತು ಹೂಡುವುದರಿಂದ ಈ ಹಬ್ಬಕ್ಕೆ "ಆರೂಡ್ ಹಬ್ಬ" ಎನ್ನುವ ಹೆಸರು ಬಂದಿರಬೇಕು. ಉಳುಮೆ ಮಾಡಿದ ಜಾಗದಲ್ಲಿ ಎಲ್ಲಾ ದಿಕ್ಕುಗಳಿಗೆ ಒಂದೊಂದು ಹೊಟ್ಟಿನ ಪಿಂಡಿಯನ್ನಿಟ್ಟು ಬೆಂಕಿ ಹಚ್ಚುತ್ತಾರೆ. ಉಳುಮೆ ಮಾಡಿ ಬಂದ ಯಜಮಾನನ ಕಾಲಿಗೆ ಮನೆಯೊಡತಿ ನೀರೆರೆದು ನಮಸ್ಕರಿಸುತ್ತಾಳೆ. ಕೃಷಿ ಪ್ರಧಾನ ಸಮಾಜ–ವಾಗಿರುವುದರಿಂದ ಹೊಸ ವರ್ಷದಂದು ಹೀಗೆ ಕೃಷಿಗೆ ಚಾಲನೆ ನೀಡುತ್ತಾರೆ. ನಂತರ ಮನೆಯವರೆಲ್ಲ ಒಟ್ಟಾಗಿ ದೇವರಿಗೆ ಪೂಜೆ ಸಲ್ಲಿಸಿ ಮಧ್ಯಾಹ್ನ ವಿವಿಧ ತರಕಾರಿಗಳ ಹಬ್ಬದೂಟ ಮಾಡುತ್ತಾರೆ. ಅಂದಿನ ಅಡುಗೆಯ ವಿಶೇಷವೆಂದರೆ ಗೋಡಂಬಿ ಪಾಯಸ. ಹೊಸ ಫಲದ ಗೇರು ಬೀಜವನ್ನು ಮೊಟ್ಟ ಮೊದಲು ಯುಗಾದಿಯ ಪಾಯಸಕ್ಕೇ ಉಪಯೋಗಿಸಬೇಕು, ಅದಕ್ಕಿಂತ ಮೊದಲು ತಿನ್ನಬಾರದು ಎನ್ನುವುದು ವಾಡಿಕೆ.

ಆದರೆ ಈಗ ಗದ್ದೆ ಉಳಲು ಕೋಣಗಳೇ ಇಲ್ಲ. ಉಳುವವರು ಮೊದಲೇ ಇಲ್ಲ. ಪಾಯಸ ಮಾಡಿದರೆ ತಿನ್ನುವವರು ಯಾರೂ ಇಲ್ಲ ಎನ್ನುವ ಪರಿಸ್ಥಿತಿಯನ್ನು ತಲುಪಿವೆ ನಮ್ಮ ಹಳ್ಳಿಗಳು. ಇದಕ್ಕೆ ಕಾರಣ ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ವಲಸೆ ಬಂದ ನಾವುಗಳೇ ಎಂದರೆ ತಪ್ಪಾಗಲಾರದು. ಯುಗಾದಿ ಎಲ್ಲರ ಬಾಳಿನಲ್ಲಿಯೂ ಶುಭವನ್ನು ತರಲಿ ಎಂದು ಹಾರೈಸುತ್ತೇವೆ.

**ನಿರ್ಮಲ ಸಿ. ರೈ**

## ಸದಸ್ಯರ ಅವಗಾಹನೆಗೆ

ಆತ್ಮೀಯ ಸದಸ್ಯರೇ,

ಸ್ನೇಹ ಚಿಂತನೆಯ ನೂರಾರು ಪ್ರತಿಗಳು ವಿಳಾಸದಾರರಿಗೆ ತಲುಪದೇ ಕಚೇರಿಗೆ ಹಿಂತಿರುಗಿ ಬರುತ್ತಿವೆ. ಇದನ್ನು ತಡೆಯಲು ಇನ್ನು ಮುಂದೆ ಅಂತಹ ವಿಳಾಸಗಳಿಗೆ ಪ್ರತಿಗಳು ರವಾನೆಯಾಗುವುದಿಲ್ಲ. 'ಸ್ನೇಹ ಚಿಂತನೆ' ಸಿಗದಿರುವ ಸದಸ್ಯರು ದಯವಿಟ್ಟು ಸಂಘದ ಕಚೇರಿಯನ್ನು ಸಂಪರ್ಕಿಸಬೇಕಾಗಿ ವಿನಂತಿ.

**ಗೌರವ ಕಾರ್ಯದರ್ಶಿ**

# ಮಹಾಜ್ಞಾನ, ಮಹಾಕರುಣ



ಡಾ. ನಾಗರಮಠ
ಜಯರಾಮ ಶೆಟ್ಟಿ

ಅಲೆದಾಡುತ್ತ ಬಂದ ಯುವಕನೊಬ್ಬ ದಿಢೀರನೆ ಬೌದ್ಧ ಪ್ರಾರ್ಥನಾ ಮಂದಿರಕ್ಕೆ ನುಗ್ಗಿ ಬೊಬ್ಬಿಡುತ್ತಾನೆ. ಬೌದ್ಧ ಬಿಕ್ಕು ವಿಚಾರಿಸಿಕೊಂಡರೂ ಫಲಿಸದೆ ಕೊನೆಗೂ ಹಿರಿಯ ಗುರುವಿನೆಡೆಗೆ ಕರೆದೊಯ್ಯಬೇಕಾಯಿತು. ಮಹಾಗುರುವಿನಲ್ಲಿ ಯುವಕ ಕೇಳಿಕೊಂಡಿದ್ದಿಷ್ಟು 'ನಾನೊಬ್ಬ ಪರಿಣತ ಚೆಸ್ ಆಟಗಾರ. ಈವರೆಗೆ 99 ಮಂದಿಯನ್ನು ಸೋಲಿಸಿದ್ದೇನೆ. ಶಾಂತಸ್ವರೂಪಿ ಮತ್ತು ಬುದ್ಧಿಮತ್ತೆಯುಳ್ಳ ಈ ಮಂದಿರದಲ್ಲಿ ನನ್ನ 100ನೇ ಸ್ಪರ್ಧಿ ಸಿಗುವನೇ?' ದುರಹಂಕಾರ ಮನ:ಸ್ಥಿತಿಯ ಆಗಂತುಕನಿಗೆ ಆಶ್ವಾಸನೆ ನೀಡುತ್ತಾ, ಮಹಾಗುರುಗಳು ಒಳಕೋಣೆಯಿಂದ ಸ್ಫುರದ್ರೂಪಿ ಬಿಕ್ಕುವನ್ನು ಕರೆದು ಪಂಥಾಹ್ವಾನ ನೀಡುತ್ತಾರೆ. ಮುಖಾಮುಖಿ ಕುಳ್ಳಿರಿಸಿ, ತಾನೊಂದು ಹರಿತ ಖಡ್ಗವನ್ನು ಎತ್ತಿ ನಿಂತ ಗುರುವನ್ನು ನೋಡಿ ಗಾಬರಿಗೊಂಡ ಆಗಂತುಕನನ್ನು ಕುರಿತು ಗುರುಗಳು ಹೇಳುತ್ತಾರೆ 'ಪಟುಗಳಿರಾ ಅಂತಿಂಥ ಚೆಸ್ ಸ್ಪರ್ಧೆ ಇದಲ್ಲ. ಇಲ್ಲಿ ಗೆದ್ದವ ಮಹಾರಾಜರ ಪ್ರಧಾನ ಮಂತ್ರಿಯಾಗುತ್ತಾನೆ, ಸೋತವನ ತಲೆ ಈ ಹರಿತ ಕತ್ತಿಯಿಂದ ಉರುಳುತ್ತದೆ!'. ಈ ಭಯಂಕರ ನಿಬಂಧನೆ ಕೇಳಿಸಿಕೊಂಡ ಪಟುಗಳು ಆಘಾತಕ್ಕೆ ಒಳಗಾದರೂ ವಿಧಿಯಿಲ್ಲದೆ ಆಟಕ್ಕೆ ಅಣಿಯಾಗುತ್ತಾರೆ.

ಈ ಹಿಂದೆ 99 ಪಟುಗಳನ್ನು ಗೆದ್ದಿದ್ದ ಆಗಂತುಕ ಆರಂಭದಿಂದಲೇ ಗೆಲ್ಲುತ್ತ ಸಾಗುತ್ತಾನೆ. ಆತನ ಚಾಣಾಕ್ಷತನದೆದುರು ಎದುರಾಳಿ ಬೌದ್ಧ ಬಿಕ್ಕುವಿನ ಆಟ ಸಾಲದಾಯಿತು ಎನ್ನುವ ಹಂತದಲ್ಲಿ, ಒಮ್ಮೆ ಕಣ್ಣುಹೊರಳಿಸಿ ಬಿಕ್ಕುವಿನ ಮುಖದಲ್ಲಿ ಹರಿಯುವ ಬೆವರನ್ನು ನೋಡಿ, ಆಗಂತುಕನಿಗೆ ಝುಲ್ಲೆನಿಸಿತು. ಮನಸ್ಸು ಆರ್ದ್ರಗೊಂಡು ಯೋಚಿಸುತ್ತಾನೆ 'ನಾನೊಬ್ಬ ದುರಹಂಕಾರಿ, ನಿಷ್ಪ್ರಯೋಜಕ ವ್ಯಕ್ತಿ. ನನ್ನಿಂದ ಯಾರಿಗೂ ಸೇವೆ ತಲುಪಿಲ್ಲ. ಕೇವಲ ಚೆಸ್ ಗೆಲ್ಲುವ ಹಠಕ್ಕೆ ಬಿದ್ದವ. ಈ ಬಿಕ್ಕುವಾದರೋ ಸಮಾಜಮುಖಿ ಗುರುವಾಗಬಲ್ಲವ. ಸಾವಿರಾರು ಮಂದಿಗೆ ಸಾಂತ್ವನ ನೀಡಬಲ್ಲ ಈ ಯುವಕನ ತಲೆ ಉರುಳಲೇಬಾರದು. ಇಂತಹ ಒಂದು ಸೇವೆಯಾದರೂ ನೀಡಿ ಸಾಯುವುದು ಲೇಸು' ಈ ತೀರ್ಮಾನಕ್ಕೆ ಬರುತ್ತಲೇ, ಬೇಕಂತಲೇ ತಪ್ಪು ಮಾಡತೊಡಗುತ್ತಾನೆ. ಇನ್ನೇನು ಸೋಲುವ ಕೊನೆಯ ಹಂತ ತಲುಪಿದಾಗ, ಮಹಾಗುರುಗಳು ಖಡ್ಗವನ್ನು ಕೆಳಕ್ಕೆ ತಂದು ಉದ್ಘೋಷಿಸುತ್ತಾರೆ 'ಅಯ್ಯಾ ಆಗಂತುಕ ಬಂಧುವೆ, ನೀನು ಮಹಾನ್. ನೀನೇ ಈ 'ಚೆಸ್' ಗೆದ್ದಿರುವೆ!'

ಅಶರೀರವಾಣಿಯಂತೆ ಕಿವಿಗಪ್ಪಳಿಸಿದ ಗುರುಗಳ ತೀರ್ಮಾನ ಕೇಳಿ ಆಗಂತುಕ ಕಣ್ಣೀರಾಗಿ ಕೇಳುತ್ತಾನೆ 'ಗುರುಗಳೆ, ಏನಿದರ ಅರ್ಥ? ನಾನೆಲ್ಲಿ ಗೆದ್ದೆ?'

ಮಹಾಗುರುಗಳು ಮಂದಿರದ ಎಲ್ಲರನ್ನೂ ಕೂರಿಸಿಕೊಂಡು ಹೇಳತೊಡಗುತ್ತಾರೆ 'ಈ ಆಗಂತುಕ ತನ್ನೆಲ್ಲ ಬುದ್ಧಿಮತ್ತೆಯಿಂದ, ವಿಚಲಿತನಾಗದೆ ಆಡಿ ಗೆಲ್ಲುವ ಹಂತಕ್ಕೆ ಬಂದ. ಅದು ನಮ್ಮಲ್ಲಿರಬೇಕಾದ 'ಮಹಾಜ್ಞಾನ'ದ ಪ್ರತೀಕ. ಎದುರಾಳಿಯ ಕುರಿತು ಒಂದು ಕ್ಷಣ ಯೋಚಿಸಿ, ಕರಗಿದ ಆ ಕ್ಷಣ ನಮ್ಮಲ್ಲಿರಬೇಕಾದ 'ಮಹಾಕರುಣ'. ಈ ಎರಡು ಲಕ್ಷಣಗಳನ್ನು ಗಮನಿಸಿ ನಾನು ಆತನನ್ನು 'ವಿಜಯಿ' ಯೆಂದು ಘೋಷಿಸಿದೆ. ನಮ್ಮ ಜೀವನದುದ್ದಕ್ಕೂ ಈ ಎರಡು ಅಂಶಗಳನ್ನು ಸಮಾನವಾಗಿ ಅಳವಡಿಸಿ ಕಾಯ್ದುಕೊಳ್ಳಬೇಕು'.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
(A Charitable Institution)

60 YEARS 1958 - 2018

# ಬಿಸು ಸಡಗರ

## ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ...

**ಭಾನುವಾರ, ದಿನಾಂಕ 14 ನೇ ಏಪ್ರಿಲ್ 2019, ಬೆಳಗ್ಗೆ 10.00 ಕ್ಕೆ**

ಉದ್ಘಾಟನಾ ಕಾರ್ಯಕ್ರಮ

ಮುಖ್ಯ ಅತಿಥಿಗಳು :

**ಶ್ರೀಮತಿ ಶಶಿರೇಖಾ ಆನಂದ ಶೆಟ್ಟಿ**
**ಶ್ರೀ ಆನಂದ್ ಎಂ. ಶೆಟ್ಟಿ**
ಮ್ಯಾನೇಜಿಂಗ್ ಡೈರೆಕ್ಟರ್, ಆರ್ಗಾನಿಕ್ ಇಂಡಸ್ಟ್ರೀಸ್ ಪ್ರೈ ಲಿಮಿಟೆಡ್, ಮುಂಬಯಿ

**ಶ್ರೀ ಅಜಿತ್ ಕುಮಾರ್ ರೈ ಮಾಲಾಡಿ**
ಅಧ್ಯಕ್ಷರು, ಬಂಟರ ಯಾನೆ ನಾಡವರ ಮಾತೃ ಸಂಘ ಮಂಗಳೂರು

ಅಧ್ಯಕ್ಷತೆ :

**ಶ್ರೀ ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

ಸರ್ವರಿಗೂ ಸ್ವಾಗತ ಬಯಸುವ,

ಮಧುಕರ ಎಂ. ಶೆಟ್ಟಿ
ಗೌರವ ಕಾರ್ಯದರ್ಶಿ

ಆರ್. ಉಪೇಂದ್ರ ಶೆಟ್ಟಿ
ಅಧ್ಯಕ್ಷರು

ಪಿ. ಪ್ರಸಾದ್ ಶೆಟ್ಟಿ
ಸಂಚಾಲಕರು, ಸಾಂಸ್ಕೃತಿಕ ಸಮಿತಿ

ವಿಜಯ್ ಜೆ. ಶೆಟ್ಟಿ ಹಾಲಾಡಿ
ಚೇರ್‌ಮೆನ್, ಸಾಂಸ್ಕೃತಿಕ ಸಮಿತಿ

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು
ಮತ್ತು ಸಾಂಸ್ಕೃತಿಕ ಸಮಿತಿ ಸದಸ್ಯರು

**ಭಾನುವಾರ, ದಿನಾಂಕ 14 ನೇ ಏಪ್ರಿಲ್ 2019, ಸಂಜೆ 5.00 ಕ್ಕೆ**

ಸಭಾ ಕಾರ್ಯಕ್ರಮ

ಮುಖ್ಯ ಅತಿಥಿ :

**ಶ್ರೀ ಸುಧಾಕರ ಎಸ್. ಶೆಟ್ಟಿ**
ಅಧ್ಯಕ್ಷರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಈಏಅಅಖ) ಮತ್ತು
ಚೇರ್‌ಮೆನ್ ಜ್ಞಾನ ಸರೋವರ ಇಂಟರ್‌ನ್ಯಾಷನಲ್ ರೆಸಿಡೆನ್ಷಿಯಲ್ ಸ್ಕೂಲ್, ಮೈಸೂರು

ಅಧ್ಯಕ್ಷತೆ :

**ಶ್ರೀ ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

ದಿವಂಗತ ಮುಲ್ಕಿ ಸುಂದರ ರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ ಪ್ರದಾನ

**ಶ್ರೀ ರಾಜ್‌ಕಿರಣ್ ರೈ ಜಿ.**
ಮ್ಯಾನೇಜಿಂಗ್ ಡೈರೆಕ್ಟರ್ & ಸಿ.ಇ.ಓ., ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಸರ್ವರಿಗೂ ಸ್ವಾಗತ ಬಯಸುವ,

ಮಧುಕರ ಎಂ. ಶೆಟ್ಟಿ
ಗೌರವ ಕಾರ್ಯದರ್ಶಿ

ಆರ್. ಉಪೇಂದ್ರ ಶೆಟ್ಟಿ
ಅಧ್ಯಕ್ಷರು

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು
ಮತ್ತು ಸಾಂಸ್ಕೃತಿಕ ಸಮಿತಿ ಸದಸ್ಯರು

ಸದಸ್ಯರೆಲ್ಲರೂ ಸಾಂಪ್ರದಾಯಿಕ ಉಡುಗೆಯಲ್ಲಿ ಬರಬೇಕಾಗಿ ವಿನಂತಿ

ಸದಸ್ಯರೆಲ್ಲರೂ ಸಾಂಪ್ರದಾಯಿಕ ಉಡುಗೆಯಲ್ಲಿ ಬರಬೇಕಾಗಿ ವಿನಂತಿ

ಬೆಳಗ್ಗೆ 9.30 ಗಂಟೆಗೆ
ಅಂತರಾಷ್ಟ್ರೀಯ ಖ್ಯಾತಿಯ
ಉದಯ್ ಜಾದೂಗಾರ್ ರವರಿಂದ
'ಜಾದೂ ಕಾರ್ಯಕ್ರಮ'

ನಾಡಪ್ರಭು ಕೆಂಪೇಗೌಡ
ಪ್ರಶಸ್ತಿ ಪುರಸ್ಕೃತ
ಗಿರೀಶ ಜೈಪ್ರಕಾಶ್ ಆರಾಧ್ಯ
ಅರ್ಪಿಸುವ
'ನಗೆ ಕಡಲು'

ಬೆಳಗ್ಗೆ 11.30 ರಿಂದ
ಅಂತರ್‌ಬಂಟರ
ಸಂಘ ಸಾಂಸ್ಕೃತಿಕ ಸ್ಪರ್ಧೆ
ದೇಶದಾದ್ಯಂತ ಹಲವಾರು
ಬಂಟರ ಸಂಘಗಳು ಭಾಗವಹಿಸಲಿದ್ದು
ಮೈ ನವಿರೇಳಿಸುವ ವಿಶೇಷ
ಸಾಂಸ್ಕೃತಿಕ ಅಚ್ಚರಿ ಮೂಡಿಬರಲಿದೆ.

ರಾತ್ರಿ 08.00 ರಿಂದ
ಪ್ರಸ್ತುತಿ : ಹೆಜ್ಜೆನಾದ,
ಮಂಗಳೂರು ಇವರಿಂದ
'ಸಾಂಸ್ಕೃತಿಕ ವಿಸ್ಮಯ'

CAPS
Education to Profess

# CAPS- EDUCATION TO PROFESS
## CENTRE FOR CA/CS COACHING

**Founder : Mundkur Shri CA Chandrashekhar Shetty S**
B.com, PGDM, PGDCA, PGDFM, DIM, DISA, LL. B, CMA, CS, FCA, M.Sc., (Psych.), Dip.IFR(UK)

## ABOUT

CAPS, the premier institute, is providing coaching for all levels of CA/CS. It is the oldest and the best Coaching Centre in Bangalore started in the year 2001 by CA Chandrashekhar Shetty (Shetty sir), with the blessings of Mundkur and Kateel Shree Durga Parameshwari and Sringeri Sharada Devi.

The comprehensive program of the Institute has been successful in helping thousands of students in achieving their dreams and aspirations of becoming a CA/CS.

## ACHARYAS

CAPS has an excellent team of faculty members, who have good reputation in teaching profession. The faculty members are multi-qualified, committed, dedicated, focused and student friendly.

## RECOGNITION

**INDIA EDUCATION AWARDS 2017** awarded CAPS- Education to profess as the BEST CA COACHING CENTRE IN KARNATAKA

All India 1st Rank- 3 Times

## HIGHLIGHTS

- Affordable Fees, but the best quality returns. **We are more focused on Value and not cost.**
- We Provide Financial Aid to Merit and Deserving Students.
- Thousands of Students Completed CA/CS Under CAPS Banner.

99 All India Ranks till Date, out of only one Centre

## VALUE ADDITION

- Sports Meet and Picnic Bi-annually
- SLC - A unique communication and leadership development program
- Yoga - Health for everyone
- Personality Development Sessions
- Jnanabhandar- Library for knowledge enrichment
